# ಮಾದರಿ ಪೋಷಕತ್ವ ಮಾರ್ಗ ಸೂಚಿಗಳು-2024



## ಅನುಷ್ಠಾನ ಮಾರ್ಗಸೂಚಿಗಳು

सत्यमेव जयते
Goverment Of India

Ministry of Women and Child Development

# ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ
# ಭಾರತ ಸರ್ಕಾರ

ಕನ್ನಡ ತರ್ಜುಮೆ :

ಮಕ್ಕಳ ರಕ್ಷಣಾ ನಿರ್ದೇಶನಾಲಯ



# ಸಂದೇಶ

ಪ್ರೀತಿ, ವಾತ್ಸಲ್ಯಗಳನ್ನು ಪಡೆದು ಕುಟುಂಬದ ಪೋಷಣೆಯಲ್ಲಿ ಬೆಳೆಯುವುದು ಪ್ರತಿಯೊಂದು ಮಗುವಿನ ಹಕ್ಕು. ಆದರೆ ಕೆಲವು ಮಕ್ಕಳು ತಂದೆ –ತಾಯಿಯ ನಿರ್ಲಕ್ಷ್ಯ, ಮಾರಣಾಂತಿಕ ಕಾಯಿಲೆ, ಅಕಾಲಿಕ ಮರಣ ಅಥವಾ ಪೋಷಕರ ಇನ್ನಿತರೆ ದೌರ್ಬಲ್ಯಗಳಿಂದಾಗಿ ಹೆತ್ತವರ ಪ್ರೀತಿಯಿಂದ ವಂಚಿತರಾಗಿ ಬಾಲ ಮಂದಿರಗಳಲ್ಲಿ ಆಶ್ರಯ ಮತ್ತು ರಕ್ಷಣೆಯನ್ನು ಪಡೆದಿರುತ್ತಾರೆ. ಅನಾಥ, ಪರಿತ್ಯಕ್ತ ಹಾಗೂ ಪೋಷಕರಿಂದ ಒಪ್ಪಿಸಲ್ಪಟ್ಟ ಮಕ್ಕಳಿಗೆ ದತ್ತು ಪ್ರಕ್ರಿಯೆಯ ಮೂಲಕ ಶಾಶ್ವತ ಕುಟುಂಬ ವ್ಯವಸ್ಥೆಯನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.

ಅಶಕ್ತ ಪೋಷಕರನ್ನು ಹೊಂದಿದ್ದು, ಕುಟುಂಬದ ವಾತಾವರಣದಿಂದ ದೂರವಾದ ಮಕ್ಕಳು ಪ್ರೀತಿ ವಾತ್ಸಲ್ಯದಿಂದ ವಂಚಿತರಾಗುತ್ತಿರುವುದು ಮಾತ್ರವಲ್ಲದೆ ದತ್ತು ಪ್ರಕ್ರಿಯೆಯಿಂದಲೂ ವಂಚಿತರಾಗುತ್ತಿದ್ದಾರೆ. ಈ ಮಕ್ಕಳನ್ನು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015, ಸೆಕ್ಷನ್ 44ರಲ್ಲಿ ಪೋಷಕತ್ವ ಎಂಬ ಪರ್ಯಾಯ ಪೋಷಣೆಯಲ್ಲಿ ಬೆಳೆಸುವುದರ ಕುರಿತು ತಿಳಿಸಲಾಗಿದೆ.

ಪೋಷಕತ್ವ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಮಾದರಿ ಪೋಷಕತ್ವ ಮಾರ್ಗಸೂಚಿ-2024 ( Model Foster Care Guidelines, 2024) ಅನ್ನು 26ನೇ ಏಪ್ರಿಲ್ 2024ರಂದು ಬಿಡುಗಡೆಗೊಳಿಸಿದೆ. ಈ ಮಾರ್ಗಸೂಚಿಯ ಕನ್ನಡ ಅವತರಣಿಯನ್ನು ಮಕ್ಕಳ ರಕ್ಷಣಾ ನಿರ್ದೇಶನಾಲಯವು ಹೊರತರುತ್ತಿರುವುದು ಸಂತಸದ ವಿಷಯವಾಗಿದೆ.

ರಾಜ್ಯದಲ್ಲಿ ಪೋಷಕತ್ವ ಅನುಷ್ಠಾನದಲ್ಲಿ ಕಾರ್ಯತತ್ಪರರಾಗಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಪಾಲನಾ ಸಂಸ್ಥೆಗಳು, ಮಕ್ಕಳ ಕಲ್ಯಾಣ ಸಮಿತಿಗಳು, ಇತರೆ ಎಲ್ಲಾ ಭಾಗೀದಾರರು ಮತ್ತು ಸಾರ್ವಜನಿಕರು ಮಾತೃಭಾಷೆಯಲ್ಲಿ ಪೋಷಕತ್ವ ಕಾರ್ಯಕ್ರಮವನ್ನು ಇನ್ನಷ್ಟು ಅರ್ಥೈಸಿಕೊಂಡು ಇನ್ನೂ ಹೆಚ್ಚೆಚ್ಚು ಮಕ್ಕಳಿಗೆ ಪರ್ಯಾಯ ಕುಟುಂಬ ಪೋಷಣೆ ಒದಗಿಸಲು ಸಹಕಾರಿಯಾಗಲಿ ಮತ್ತು ಈ ಮೂಲಕ ಪಾಲನೆ ಮತ್ತು ಪೋಷಣೆ ಅಗತ್ಯವಿರುವ ಮಕ್ಕಳಿಗೆ ಕುಟುಂಬ ಪ್ರೀತಿ, ಅಕ್ಕರೆ ದೊರೆಯಲಿ ಎಂದು ಹಾರೈಸುತ್ತೇನೆ.



**( ಲಕ್ಷ್ಮೀ ಆರ್ ಹೆಬ್ಬಾಳ್ಕರ್)**

ಮಾನ್ಯ ಸಚಿವರು, ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಇಲಾಖೆ, ವಿಧಾನ ಸೌಧ,
ಬೆಂಗಳೂರು.



# <u>ಸಂದೇಶ</u>

ಪೋಷಕರ ಪ್ರೀತಿ, ವಾತ್ಸಲ್ಯಗಳಿಂದ ವಂಚಿತರಾದ ಮಕ್ಕಳಿಗೆ ಕುಟುಂಬದ ಪ್ರೀತಿಯನ್ನು, ಬಾಂಧವ್ಯವನ್ನು ಪರಿಚಯಿಸುವಲ್ಲಿ ಪೋಷಕತ್ವ ಕಾರ್ಯಕ್ರಮವು ಅತ್ಯಂತ ಮಹತ್ತರದ್ದಾಗಿದೆ.

ಕೇಂದ್ರ ಸರ್ಕಾರದ Model Foster Care Guidelines, 2024ರ ಕನ್ನಡ ಅವತರಣಿಕೆಯನ್ನು ಮಕ್ಕಳ ರಕ್ಷಣಾ ನಿರ್ದೇಶನಾಲಯವು ಹೊರತಂದಿರುವುದು ಶ್ಲಾಘನೀಯವಾದುದಾಗಿದೆ, ಇದಕ್ಕಾಗಿ ಇಲಾಖೆಯನ್ನು ಅಭಿನಂದಿಸುತ್ತಾ, ಈ ಕೈಪಿಡಿಯು ರಾಜ್ಯದ ಸಾವಿರಾರು ಸಹೃದಯಿಗಳನ್ನು ತಲುಪಿ, ಅಕ್ಕರೆಯ ಆಸರೆಗಾಗಿ ಹಾತೊರೆಯುತ್ತಿರುವ ಮುಗ್ಧಮಕ್ಕಳಿಗೆ ಮಮತೆಯ ಪರ್ಯಾಯ ಕುಟುಂಬಗಳು ದೊರೆಯುವಂತಾಗಲಿ ಮತ್ತು ಮಕ್ಕಳ ಜೀವನದಲ್ಲಿ ಹೊಸಬೆಳಕು ಮೂಡುವಂತಾಗಲಿ ಎಂದು ಹಾರೈಸುತ್ತೇನೆ.

(ಡಾ.ಶಮ್ಲಾ ಇಕ್ಬಾಲ್., ಭಾ.ಆ.ಸೇ)
ಸರ್ಕಾರದ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ



# ಸಂದೇಶ

ಪ್ರತೀ ಮಗುವೂ ಉತ್ತಮ ಶಿಕ್ಷಣವನ್ನು ಪಡೆದು, ಜವಾಬ್ದಾರಿಯುತ ಸತ್ಪ್ರಜೆಯಾಗಿ ಬೆಳೆದು ಸಮಾಜಕ್ಕೆ ಮತ್ತು ದೇಶಕ್ಕೆ ಕೊಡುಗೆಯಾಗಬೇಕು. ಮಗುವಿನ ಸರ್ವೋತ್ತಮ ಬೆಳವಣಿಗೆಗೆ ಬೆಂಬಲ, ಪೋಷಣೆ ನೀಡಲು, ಮಗುವಿನ ಆಸೆ, ಕನಸುಗಳಿಗೆ ಜೀವ ತುಂಬಲು ಪೋಷಕರ ಬೆಂಬಲ ಅಗತ್ಯ. ಆದರೆ, ಕೆಲವು ಮಕ್ಕಳು ಕಾರಣಾಂತರಗಳಿಂದ ಪೋಷಕರ ಆಸರೆ ಸಿಗದೇ ಮಕ್ಕಳ ಪಾಲನಾ ಸಂಸ್ಥೆಗಳ ಆಶ್ರಯದಲ್ಲಿ ಬೆಳೆಯುತ್ತಿದ್ದಾರೆ. ಇಂತಹ ಮಕ್ಕಳಿಗೆ ಕುಟುಂಬದ ಪ್ರೀತಿಯನ್ನು ನೀಡಿ, ಬೆಳವಣಿಗೆಗೆ ಬೆನ್ನೆಲುಬಾಗಿ, ಮಾರ್ಗದರ್ಶನ ನೀಡುವ ಅಪ್ಪ, ಅಮ್ಮನ, ಅಕ್ಕ, ಅಣ್ಣನ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಪೋಷಕತ್ವದಂಥ ಪರ್ಯಾಯ ಪೋಷಣಾ ಕಾರ್ಯಕ್ರಮವು ವರದಾನವಾಗಿದೆ.

ಕೇಂದ್ರ ಸರ್ಕಾರದ ಮಾದರಿ ಪೋಷಕತ್ವ ಮಾರ್ಗಸೂಚಿ-2024 (Model Foster Care Guidelines, 2024) ರ ಕನ್ನಡ ಅವತರಣಿಕೆಯನ್ನು ಮಕ್ಕಳ ರಕ್ಷಣಾ ನಿರ್ದೇಶನಾಲಯವು ಹೊರತರುತ್ತಿರುವುದು ಪ್ರತೀ ಮಗುವಿಗೂ ಅಕ್ಕರೆಯ ಪರಿವಾರ ದೊರಕಿಸಿಕೊಡುವಲ್ಲಿ ಮಹತ್ವದ ಹೆಜ್ಜೆಯಾಗಿದೆ. ಸಾವಿರಾರು ಮಕ್ಕಳು ಪ್ರೀತಿಯ ಪರಿವಾರವನ್ನು ಪಡೆಯುವಂತಾಗಲಿ ಎಂದು ಹಾರೈಸುತ್ತೇನೆ.

ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

## ಸಂಕ್ಷೇಪಣಗಳು:

| | | |
|---|---|---|
| **CARA** | Central Adoption Resource Authority | ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ |
| **CCI** | Child Care Institutions | ಮಕ್ಕಳ ಪಾಲನಾ ಸಂಸ್ಥೆ. |
| **CNCP** | Children In Need Of Care and Protection | ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಗು |
| **CSR** | Child Study Report | ಮಕ್ಕಳ ಅಧ್ಯಯನ ವರದಿ |
| **CWC** | Child Welfare Committee | ಮಕ್ಕಳ ಕಲ್ಯಾಣ ಸಮಿತಿ |
| **DCPU** | District Child Protection Unit | ಜಿಲ್ಲಾ ಮಕ್ಕಳ ರಕ್ಷಣಾ ಘಟಕ |
| **DCPO** | District Child Protection Officer | ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ. |
| **HSR** | Home Study Report | ಗೃಹ ಅಧ್ಯಯನ ವರದಿ. |
| **JJ ACT** | Juvenile Justice (Care and Protection of Children) Act 2015 | ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 (2021 ರಲ್ಲಿ ತಿದ್ದುಪಡಿ ಮಾಡಿದಂತೆ). |
| **JJ RULES** | Juvenile Justice (Care and Protection of Children) Model Rules 2016 | ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ). |
| **LFA** | Legally Free for Adoption | ಕಾನೂನು ಬದ್ಧವಾಗಿ ದತ್ತು ಮುಕ್ತ. |
| **NGOs** | Non Government Organizations | ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು. |
| **PO** | Probation Officer | ಪರಿವೀಕ್ಷಣಾಧಿಕಾರಿ. |
| **PO-IC** | Protection Officer - Institutional Care | ಮಕ್ಕಳ ರಕ್ಷಣಾಧಿಕಾರಿಗಳು –ಸಾಂಸ್ಥಿಕ ಪಾಲನೆ. |
| **PO-NIC** | Protection Officer – Non-Institutional Care | ಮಕ್ಕಳ ರಕ್ಷಣಾಧಿಕಾರಿಗಳು –ಅಸಾಂಸ್ಥಿಕ ಪಾಲನೆ. |
| **PRI** | Panchayat Raj Institution | ಗ್ರಾಮೀಣಾಭಿವೃದ್ಧಿ ಸಂಸ್ಥೆ. |
| **SAA** | Specialized Adoption Agency | ವಿಶೇಷ ದತ್ತು ಕೇಂದ್ರ. |
| **SFCAC** | Sponsorship and Foster Care Approval Committee | ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿ. |
| **SIR** | Social Investigation Report | ಸಾಮಾಜಿಕ ತನಿಖಾ ವರದಿ. |
| **ICP** | Individual Care Plan | ವೈಯುಕ್ತಿಕ ಪಾಲನಾ ಯೋಜನೆ. |
| **ULB** | Urban Local Body | ನಗರ ಸ್ಥಳೀಯ ಸಂಸ್ಥೆ. |

# ಮಾದರಿ ಪೋಷಕತ್ವ ಮಾರ್ಗ ಸೂಚಿಗಳು 2024

ಈ ಮಾರ್ಗ ಸೂಚಿಗಳು ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 (2021 ರಲ್ಲಿ ತಿದ್ದುಪಡಿ ಮಾಡಿದಂತೆ), ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ), ದತ್ತು ನಿಯಮಗಳು 2022 ಮತ್ತು ಭಾರತ ಸರ್ಕಾರದ ಮಿಷನ್ ವಾತ್ಸಲ್ಯ ಯೋಜನೆಗಳಲ್ಲಿ ನಿಗಧಿ ಪಡಿಸಿರುವ ವಿವಿಧ ನಿಬಂಧನೆಗಳನ್ನು ಆಧರಿಸಿದೆ. ಈ ಮಾರ್ಗಸೂಚಿಗಳು ಮಾದರಿ ಪೋಷಕತ್ವ ಮಾರ್ಗಸೂಚಿ 2016 ರ ಅನುಕ್ರಮದಲ್ಲಿದೆ ಮತ್ತು ಭಾರತ ಸರ್ಕಾರದ ವತಿಯಿಂದ ಈ ಮೂಲಕ ಪೋಷಕತ್ವ ಕಾರ್ಯ ವಿಧಾನಗಳು, ಭಾಗಿದಾರರ ಕರ್ತವ್ಯ ಮತ್ತು ಜವಾಬ್ದಾರಿಗಳು ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದ ವಿವಿಧ ಅಂಶಗಳನ್ನು ಒಳಗೊಂಡ ಮಾದರಿ ಪೋಷಕತ್ವ ಮಾರ್ಗಸೂಚಿ 2024ನ್ನು ಅಧಿಸೂಚನೆಗೊಳಿಸಲಾಗಿದೆ.

## ಅಧ್ಯಾಯ-1
## ಪೂರ್ವಭಾವಿ

1. **ಸಂಕ್ಷಿಪ್ತ ನಾಮ ಮತ್ತು ಪ್ರಾರಂಭ;**

   1. ಈ ಮಾರ್ಗಸೂಚಿಗಳನ್ನು ಮಾದರಿ ಪೋಷಕತ್ವ ಮಾರ್ಗಸೂಚಿಗಳು 2024 ಎಂದು ಕರೆಯಬಹುದು.
   2. ಈ ಮಾರ್ಗಸೂಚಿಗಳು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುತ್ತದೆ.

2. **ವ್ಯಾಖ್ಯಾನಗಳು :**

   ಈ ಮಾರ್ಗ ಸೂಚಿಗಳಲ್ಲಿ ಸಂದರ್ಭಕ್ಕೆ ಅಗತ್ಯವಿರುವ ಹೊರತು;

   1. "ಕಾಯಿದೆ", "ಪರಿತ್ಯಕ್ತ ಮಗು", "ದತ್ತು", "ದತ್ತು ಸ್ವೀಕಾರ ನಿಯಮಗಳು", "ಅನುಪಾಲನಾ ಸೇವೆ", "ಮಗುವಿನ ಉತ್ತಮ ಹಿತಾಸಕ್ತಿ", "ಆರೈಕೆ / ಪೋಷಣೆ ನೀಡುವವರು", "ಮಕ್ಕಳು", "ಮಕ್ಕಳ ಪಾಲನಾ ಸಂಸ್ಥೆ", "ಮಕ್ಕಳ ಪಾಲನೆ ", "ಅಧ್ಯಯನ ವರದಿ", "ಸಮಿತಿ", "ಗೊತ್ತು ಪಡಿಸಲಾದ ಪೋರ್ಟಲ್", "ಜಿಲ್ಲಾ ಮಕ್ಕಳ ರಕ್ಷಣಾ ಘಟಕ", "ಜಿಲ್ಲಾ ದಂಡಾಧಿಕಾರಿಗಳು", "ಅರ್ಹ ಸೌಲಭ್ಯ", "ಪೋಷಕತ್ವ", "ಪೋಷಕ ಕುಟುಂಬ", "ಗುಂಪು ಪೋಷಕತ್ವ", "ಪೋಷಕರು", "ಗೃಹ ಅಧ್ಯಯನ ವರದಿ", " ದೇಶೀ ದತ್ತು", "ಅಂತರ್ ದೇಶೀ ದತ್ತು", "ವೈಯುಕ್ತಿಕ ಪಾಲನಾ ಯೋಜನೆ", "ಮಿಷನ್ ವಾತ್ಸಲ್ಯ ಯೋಜನೆ", "ಅನಾಥ", "ಹಿರಿಯ ಮಗು", "ನಿರೀಕ್ಷಿತ ದತ್ತು ಪೋಷಕರು", "ವಿಶೇಷ ದತ್ತು ಕೇಂದ್ರ", ರಾಜ್ಯ ದತ್ತು ಸಂಪನ್ಮೂಲ ದತ್ತು ಕೇಂದ್ರ", "ರಾಜ್ಯ ಸರ್ಕಾರ", "ಒಪ್ಪಿಸಲ್ಪಟ್ಟ ಮಗು" ಮತ್ತು ಈ ಮಾರ್ಗಸೂಚಿಯಲ್ಲಿ ಬಳಸಲಾದ ಮತ್ತು ಅಭಿವ್ಯಕ್ತಿಸಲಾದ ಆದರೆ ಈ ಮಾರ್ಗಸೂಚಿಯಲ್ಲಿ ವ್ಯಾಖ್ಯಾನಿಸದ ಎಲ್ಲಾ ಪದಗಳು ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 (2021 ರಲ್ಲಿ ತಿದ್ದುಪಡಿ ಮಾಡಿದಂತೆ), ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ), ದತ್ತು ನಿಯಮಗಳು 2022ರ ನಿಗದಿಪಡಿಸಲಾದ ಅದೇ ಅರ್ಥವನ್ನು ಹೊಂದಿರುತ್ತದೆ.

   2. "Children with No Visitation" / "ಪೋಷಕರ ಭೇಟಿ ಇಲ್ಲದ ಮಕ್ಕಳು" ಎಂದರೆ ಮಗುವಿನ ಪೋಷಕರು ಕಳೆದ 1 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯಿಂದ ಮಗುವನ್ನು ಭೇಟಿಯಾಗಲು ಅಥವಾ ಮಗುವು ಪೋಷಕರನ್ನು ಭೇಟಿಯಾಗದಿದ್ದಲ್ಲಿ ಅಂತಹ ಎಲ್ಲಾ ಪ್ರಕರಣಗಳನ್ನು "ಪೋಷಕರ ಭೇಟಿ ಇಲ್ಲದ ಮಕ್ಕಳು" ಎಂದು ವರ್ಗೀಕರಿಸಲಾಗುತ್ತದೆ.

3. "Children with Unfit Guardian" / "ಅನರ್ಹ ಪೋಷಕರನ್ನು ಹೊಂದಿರುವ ಮಕ್ಕಳು" ಎಂದರೆ ಪೋಷಕರು ಮಗುವನ್ನು ಪೋಷಿಸಲು ಅಸಮರ್ಥರಾಗಿದ್ದರೆ ಅಥವಾ ಮಗುವನ್ನು ಪಾಲನೆ ಮಾಡಲ ಬಯಸದೇ ಇದ್ದಲ್ಲಿ - ಮಾದಕ ವ್ಯಸನಿಗಳಾಗಿದ್ದು, ಮಗುವನ್ನು ಹಿಂಸಿಸುವುದು ಅಥವಾ ನಿರ್ಲಕ್ಷಿಸುವುದು, ಅಪರಾಧ ಹಿನ್ನೆಲೆ ಹೊಂದಿದ್ದರೆ, ತಮ್ಮನ್ನು ತಾವು ಪೋಷಿಸಿಕೊಳ್ಳಲು ಅಸಮರ್ಥ (ವಿಶೇಷ ಚೇತನ, ಮಾರಾಣಾಂತಿಕ ಕಾಯಿಲೆ, ಮಾನಸಿಕ ಅಸ್ವಸ್ಥ) ಇತ್ಯಾದಿ ಪೋಷಕರನ್ನು ಹೊಂದಿರುವ ಮಕ್ಕಳನ್ನು "ಅನರ್ಹ ಪೋಷಕರನ್ನು ಹೊಂದಿರುವ ಮಕ್ಕಳು" ಎಂದು ವರ್ಗೀಕರಿಸಲಾಗುತ್ತದೆ.

4. "Foster Adoption"/ ''ಪೋಷಕ ದತ್ತು'' ಎಂದರೆ ಈ ಮಾರ್ಗಸೂಚಿಗಳು ಮತ್ತು ದತ್ತು ಸ್ವೀಕಾರ ನಿಯಮಾವಳಿಗಳಲ್ಲಿ ನಿಗಧಿಪಡಿಸಿದ ಕಾರ್ಯವಿಧಾನಗಳನ್ನು ಅನುಸರಿಸಿ, ಅದೇ ಸಾಕು ಕುಟುಂಬದೊಂದಿಗೆ ಪೋಷಕತ್ವಕ್ಕೆ ಒಳಪಟ್ಟಿರುವ ಮಗುವನ್ನು ದತ್ತು ನೀಡುವುದು.

5. "Prospective Foster Parents" / '' ನಿರೀಕ್ಷಿತ ಸಾಕು ಪೋಷಕರು'' ಎಂದರೆ ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 (2021ರಲ್ಲಿ ತಿದ್ದುಪಡಿ ಮಾಡಿದಂತೆ), ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022ರಲ್ಲಿ ತಿದ್ದುಪಡಿ ಮಾಡಿದಂತೆ) ಮತ್ತು ಈ ಮಾರ್ಗ ಸೂಚಿಯ ನಿಬಂಧನೆಗಳ ಪ್ರಕಾರ ಮಗುವನ್ನು ಪೋಷಿಸಿಲು ಅರ್ಹರಾಗಿರುವ ವ್ಯಕ್ತಿ ಅಥವಾ ವ್ಯಕ್ತಿಗಳು.

6. "ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿ" ಎಂದರೆ ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುದಾನವನ್ನು ಪರಿಶೀಲಿಸಲು ಮತ್ತು ಮಂಜೂರು ಮಾಡಲು ಜಿಲ್ಲಾ ದಂಡಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿ ಜಿಲ್ಲೆಯಲ್ಲಿ ರಚಿಸಲಾದ ಸಮಿತಿ.

## 3. **ಪೋಷಕತ್ವದ ಮೂಲಭೂತ ತತ್ವಗಳು;**

1. ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 (2021 ರಲ್ಲಿ ತಿದ್ದುಪಡಿ ಮಾಡಿದಂತೆ) ಕಾಯಿದೆಯ ಸೇಕ್ಷನ್ 44 ಮತ್ತು ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ)ರ ನಿಯಮ 23ರ ನಿಬಂಧನೆಗಳ್ವನಯ ಕೆಳಕಂಡ ಮೂಲಭೂತ ತತ್ವಗಳು ಪೋಷಕತ್ವವನ್ನು ಆಳುತ್ತವೆ.

a) ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳನ್ನು ಅಲ್ಪಾವಧಿ ಅಥವಾ ವಿಸ್ತೃತ್ತ ಅವಧಿಗೆ ಮಕ್ಕಳ ಕಲ್ಯಾಣ ಸಮಿತಿಯ ಆದೇಶದೊಂದಿಗೆ ಗುಂಪು ಪೋಷಕತ್ವವೂ ಒಳಗೊಡಂತೆ ಮಗುವಿನ ಜೈವಿಕ ಪೋಷಕರಲ್ಲದ ಅಥವಾ ದತ್ತು ಪೋಷಕರಲ್ಲದ ಕುಟುಂಬಗಳಲ್ಲಿ ಪೋಷಕತ್ವಕ್ಕೆ ಒಳಪಡಿಸಬಹುದಾಗಿದೆ

b) ಮಗುವನ್ನು ಪೋಷಕ ಕುಟುಂಬ ಅಥವಾ ಗುಂಪು ಪೋಷಕತ್ವದಲ್ಲಿ ಇರಿಸುವಾಗ ಮಗುವಿನ ಉತ್ತಮ ಹಿತಾಸಕ್ತಿಯು ಅತ್ಯುನ್ನತವಾಗಿ ಪರಿಗಣಿಸಲ್ಪಡುತ್ತದೆ

c) ಮಗು ಅಥವಾ ಮಕ್ಕಳನ್ನು ಅವರ ಸ್ವಂತ ಸಾಮಾಜಿ- ಸಾಂಸ್ಕೃತಿಕ ಪರಿಸರದಲ್ಲಿ ಇರಿಸಲು ಆದ್ಯತೆ ನೀಡಲಾಗುವುದು.

d) ಕುಟುಂಬ ಅಥವಾ ಕುಟುಂಬದಂತಹ ಪರಿಸರವು ಮಗುವಿಗೆ ಅತ್ಯಂತ ಅನುಕೂಲಕರವಾಗಿದೆ ಮತ್ತು ಅಂತಹ ವಾತಾವರಣದಲ್ಲಿ ಬೆಳೆಯುವ ಹಕ್ಕು ಪ್ರತಿ ಮಗುವಿಗೆ ಇರುತ್ತದೆ.

e) ಪ್ರಸ್ತುತ ಮಾರ್ಗಸೂಚಿಯ ವ್ಯಾಪ್ತಿಯೊಳಗೆ, ಪ್ರಕರಣವಾರು ಮಗುವಿನ ಸುರಕ್ಷತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಕೋನದಿಂದ ಎಲ್ಲಾ ನಿರ್ಧಾರಗಳು, ಉಪಕ್ರಮಗಳು ಮತ್ತು ವಿಧಾನಗಳು ಅಗತ್ಯ ಮತ್ತು ಸೂಕ್ತತೆಯ ತತ್ವದ ಮೇಲೆ ಮಗುವಿನ ಉತ್ತಮ ಹಿತಾಸಕ್ತಿಯನ್ನು ಆಧರಿಸಿರಬೇಕಾಗಿರುತ್ತದೆ.

f) ಎಲ್ಲಾ ನಿರ್ಧಾರಗಳು, ಉಪಕ್ರಮಗಳು ಮತ್ತು ವಿಧಾನಗಳು ಮಗುವಿನ ಸಮಾಲೋಚನೆಯ ಹಕ್ಕನ್ನು ಗೌರವಿಸಬೇಕು ಮತ್ತು ಮಗುವಿನ ವಿಕಸನ ಸಾಮರ್ಥ್ಯಕ್ಕೆ ಅನುಗುಣವಾಗಿ ಮಗುವಿನ ಅಭಿಪ್ರಾಯವನ್ನು; ಲಭ್ಯವಿರುವಲ್ಲಿ ಕುಟುಂಬಗಳು ಮತ್ತು ಕಾನೂನು ಬದ್ಧ ಪೋಷಕರ ಸಂಪೂರ್ಣ ಭಾಗವಹಿಸುವಿಕೆಯೊಂದಿಗೆ ಸೂಕ್ತವಾಗಿ ಪರಿಗಣಿಸಬೇಕು.

g) ಒಡಹುಟ್ಟಿದವರು ಮತ್ತು ಅವಳಿಗಳನ್ನು ಸಾಧ್ಯವದಷ್ಟು ಒಂದೇ ಕುಟುಂಬ ಅಥವಾ ಗುಂಪು ಪೋಷಕತ್ವದಲ್ಲಿ ಇರಿಸಬೇಕು, ಒಂದು ವೇಳೆ ಒಡಹುಟ್ಟಿದವರನ್ನು ಅವರ ಹಿತದೃಷ್ಟಿಯಿಂದ ಬೇರ್ಪಡಿಸಬೇಕಾಗಿದ್ದಲ್ಲಿ, ಅಗತ್ಯವಿರುವಲ್ಲೆಲ್ಲ ಒಡಹುಟ್ಟಿದವರ ಒಪ್ಪಿಗೆ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಅನುಮೋದನೆಯು ಕಡ್ಡಾಯವಾಗಿರುತ್ತದೆ.

**4. ಪೋಷಕತ್ವಕ್ಕೆ ಅರ್ಹರಾಗಿರುವ ಮಕ್ಕಳು:-**

1. ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ (6 ವರ್ಷ ಮೇಲ್ಪಟ್ಟ) ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ವಾಸಿಸುತ್ತಿರುವ ಅಥವಾ ಸಮುದಾಯದಲ್ಲಿ ವಾಸಿಸುತ್ತಿರುವ (ಬಾಲ ನ್ಯಾಯ ಮಾದರಿ ನಿಯಮಗಳು, 2016, 2022ರ ತಿದ್ದುಪಡಿಯ ನಿಯಮ 23(4)ರಂತೆ) ಹಾಗೂ 'ಪೋಷಕರ ಭೇಟಿಯಿಲ್ಲದ' ವರ್ಗದ ಮಕ್ಕಳು ಮತ್ತು 'ಅನರ್ಹ ಪೋಷಕ'ರನ್ನು ಹೊಂದಿರುವ ವರ್ಗದ ಮಕ್ಕಳು.
2. ಕಾನೂನು ಬದ್ಧವಾಗಿ ದತ್ತು ಮುಕ್ತವಾಗಿದ್ದಾಗ್ಯೂ ದೇಶೀ ಅಥವಾ ಅಂತರ್ ದೇಶೀ ದತ್ತು ಮೂಲಕ ಕುಟುಂಬ ದೊರಕದ, ದತ್ತು ಕಷ್ಟಸಾಧ್ಯ (Hard to Place) ಮಕ್ಕಳು ಅಥವಾ ದತ್ತು ಸ್ವೀಕಾರ ನಿಯಮಾವಳಿಗಳಲ್ಲಿ ಅವಕಾಶ ಕಲ್ಪಿಸಲಾಗಿರುವಂತೆ ವಿಶೇಷ ಅಗತ್ಯವುಳ್ಳ ಮಕ್ಕಳು.

5. **ಪೋಷಕತ್ವದ ಅವಧಿ -** ಬಾಲ ನ್ಯಾಯ ಮಾದರಿ ನಿಯಮಗಳು, 2016, 2022ರ ತಿದ್ದುಪಡಿಯ ನಿಯಮ 23(6) ಮತ್ತು (7)ರಲ್ಲಿ ಅವಕಾಶ ಕಲ್ಪಿಸಿರುವಂತೆ, ಮಗುವಿನ ಅಗತ್ಯತೆಯ ಆಧಾರದ ಮೇಲೆ ಅಲ್ಪಾವಧಿಯ ಅಥವಾ ದೀರ್ಘಾವಧಿಯ ಪೋಷಣೆಗಾಗಿ ಪೋಷಕತ್ವಕ್ಕೆ ನೀಡಬಹುದಾಗಿರುತ್ತದೆ.

1. ಅಲ್ಪಾವಧಿಯ ಪೋಷಕತ್ವದಲ್ಲಿ ಅವಧಿಯು ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಯಾಗಿರತಕ್ಕದ್ದಲ್ಲ.
2. ದೀರ್ಘಾವಧಿಯ ಪೋಷಕತ್ವದ ಅವಧಿಯು ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಇರತಕ್ಕದ್ದು. ಪೋಷಕತ್ವ ಅಥವಾ ಗುಂಪು ಪೋಷಕತ್ವ ಕುಟುಂಬದೊಂದಿಗೆ ಮಗುವಿನ ಹೊಂದಾಣಿಕೆಯ ಮೌಲ್ಯಮಾಪನದ ಆಧಾರದ ಮೇಲೆ, ಮಗುವಿಗೆ 18 ವರ್ಷ ವಯಸ್ಸಾಗುವವರೆಗೆ ಈ ಅವಧಿಯನ್ನು ಸಮಿತಿಯು ನಿಯತಕಾಲಿಕವಾಗಿ ವಿಸ್ತರಿಸಬಹುದಾಗಿದೆ.

6. **ಪೋಷಕತ್ವದಲ್ಲಿ ಮಗುವನ್ನು ಇರಿಸಲು ಆದ್ಯತೆಯ ಕ್ರಮ-**

ಗುಂಪು ಪೋಷಕತ್ವವೂ ಸೇರಿದಂತೆ ಪೋಷಕತ್ವದಲ್ಲಿ ಮಕ್ಕಳನ್ನು ಇರಿಸುವಾಗ ರಾಜ್ಯ ಸರ್ಕಾರವು ಈ ಕೆಳಗಿನ ಆದ್ಯತೆಯ ಕ್ರಮವನ್ನು ಅನುಸರಿಸುತ್ತದೆ, ಅವುಗಳೆಂದರೆ:

1. ಮಗುವನ್ನು ತನ್ನದೇ ಸಾಮಾಜಿಕ ಸಾಂಸ್ಕೃತಿಕ ಪರಿಸರದಲ್ಲಿ ಇರಿಸಲಾಗುತ್ತದೆ ಮತ್ತು ಮಗುವಿನ ಸಾಂಸ್ಕೃತಿಕ ಸಾಮ್ಯತೆಯುಳ್ಳ, ಬುಡಕಟ್ಟು ಮತ್ತು / ಅಥವಾ ಸಮುದಾಯಕ್ಕೆ ಸಂಬಂಧಪಡುವ ಕಟುಂಬಗಳಿಗೆ ಆದ್ಯತೆಯನ್ನು ನೀಡಲಾಗುವುದು.
2. ಮಗುವಿನ ಜೈವಿಕ ಅಥವಾ ದತ್ತು ಪೋಷಕರಲ್ಲದ, ಆದರೆ ವಿಸ್ತೃತ ಕುಟುಂಬಕ್ಕೆ ಮೊದಲ ಆದ್ಯತೆಯನ್ನು ನೀಡಬೇಕು. ಪರಂತು ಹತ್ತಿರದ ಅಥವಾ ವಿಸ್ತೃತ ಕುಟುಂಬದ ಯಾವುದೇ ಸದಸ್ಯರು ಮಗುವಿನ ಮಲೆ ದೌರ್ಜನ್ಯ ಎಸಗಿದ ಆಪಾದಿತರು ಅಥವಾ ಅಪರಾಧಿಗಳಾಗಿರಬಾರದು

3. ಮಗುವಿಗೆ ತಿಳಿದಿರುವ ಸಂಬಂಧಿಕರಲ್ಲದ ಕುಟುಂಬಕ್ಕೆ 2ನೇ ಆದ್ಯತೆಯನ್ನು ನೀಡಬೇಕು;
4. ಸಂಬಂಧವಿಲ್ಲದ ಪೋಷಕತ್ವ ಕುಟುಂಬಕ್ಕೆ 3ನೇ ಆದ್ಯತೆಯನ್ನು ನೀಡಬೇಕು; ಮತ್ತು
5. ಗುಂಪು ಪೋಷಕತ್ವಕ್ಕೆ 4ನೇ ಆದ್ಯತೆಯನ್ನು ನೀಡಲಾಗುವುದು.

7. **ಅನುಷ್ಠಾನಕ್ಕಾಗಿ ನೋಡಲ್ ಪ್ರಾಧಿಕಾರ**:- ಜಿಲ್ಲಾ ಮಕ್ಕಳ ರಕ್ಷಣಾ ಘಟಕವು, ಪೋಷಕತ್ವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ನೋಡಲ್ ಪ್ರಾಧಿಕಾರವಾಗಿರುತ್ತದೆ ಮತ್ತು ಮಗುವನ್ನು ಪೋಷಕತ್ವದಲ್ಲಿ ಇರಿಸುವುದಕ್ಕೆ ಸಂಬಂಧಿಸಿದ ಎಲ್ಲಾ ನಿರ್ಧಾರಗಳನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯು 3 ತಿಂಗಳ ಅವಧಿಯಲ್ಲಿ ಕೈಗೊಳ್ಳಬೇಕು. (ಪೋಷಕತ್ವಕ್ಕಾಗಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ)

8. **ಪೋಷಕತ್ವ ಕಾರ್ಯಕ್ರಮದಡಿಯಲ್ಲಿ ಆರ್ಥಿಕ ಬೆಂಬಲ ಮತ್ತು ಅನುದಾನ ಬಿಡುಗಡೆ ಕಾರ್ಯ ವಿಧಾನ**

1. ಮಿಷನ್ ವಾತ್ಸಲ್ಯ ಯೋಜನೆಯಲ್ಲಿ ನಿಗಧಿ ಪಡಿಸಿದಂತೆ ಆರ್ಥಿಕ ಬೆಂಬಲವನ್ನು ಪರಿಗಣಿಸಲಾಗುತ್ತದೆ.
2. ಪಾಲನೆ ಮಾಡುವ ಕುಟುಂಬವು ಅರ್ಹರಿದ್ದಲ್ಲಿ ಮಿಷನ್ ವಾತ್ಸಲ್ಯ ದರಗಳನ್ವಯ ಆರ್ಥಿಕ ಬೆಂಬಲವನ್ನು ಪಡೆಯಬಹುದು.
3. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮಗು ಮತ್ತು ಪೋಷಕತ್ವದ ಓರ್ವ ಪೋಷಕರ ಹೆಸರಿನಲ್ಲಿ ಜಂಟಿಯಾಗಿ ನಿರ್ವಹಿಸಬೇಕಾದ ಖಾತೆಯನ್ನು ಯಾವುದೇ ನಿಗದಿತ ಬ್ಯಾಂಕ್ ಅಥವಾ ಪೋಸ್ಟ್ ಆಫೀಸ್‌ನಲ್ಲಿ ತೆರೆಯಬೇಕು.
4. CWC ಯಿಂದ ಅಂತಿಮ ಆದೇಶವಾದ 1 ತಿಂಗಳೊಳಗೆ ಬ್ಯಾಂಕ್ ಖಾತೆಯನ್ನು ತೆರೆಯಲಾಗುತ್ತದೆ ಮತ್ತು ಹಣಕಾಸಿನ ಬೆಂಬಲವನ್ನು ನೇರವಾಗಿ ಮಗುವಿನ ಜಂಟಿ ಖಾತೆಗೆ ವರ್ಗಾಯಿಸಲಾಗುತ್ತದೆ.
5. ಮಿಷನ್ ಖಾತೆಯಿಂದ ಮಗುವಿನ ಖಾತೆಗೆ ಮೊತ್ತವನ್ನು ಮಂಜೂರು ಮಾಡಲು ಜಿಲ್ಲಾ ದಂಡಾಧಿಕಾರಿಗಳು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ ಮತ್ತು ಒಮ್ಮೆ ಮಂಜೂರು ಮಾಡಿದ ನಂತರ, ಮೊತ್ತವನ್ನು ಮಗುವಿನ ಖಾತೆಗೆ ಮಾಸಿಕ ಆಧಾರ ಮೇಲೆ ಜಮೆ ಮಾಡಬೇಕು.
6. ರಾಜ್ಯ ಸರ್ಕಾರಗಳು / ಕೇಂದ್ರಾಡಳಿತ ಪ್ರದೇಶಗಳು ಪಾಯೋಜಕತ್ವ ಮತ್ತು ಪೋಷಕತ್ವ ನಿಧಿಯ ಅಡಿಯಲ್ಲಿ SCPS ಗೆ ಹೆಚ್ಚುವರಿ ಅನುದಾನವನ್ನು ನೀಡಲು ಪ್ರೋತ್ಸಾಹಿಸಲಾಗುತ್ತದೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಬೆಂಬಲದೊಂದಿಗೆ ರಕ್ಷಣೆ ಅಗತ್ಯವಿರುವ ಮಕ್ಕಳನ್ನು ಪೂರ್ವಭಾವಿಯಾಗಿ ಗುರುತಿಸಲು ಕ್ರಮಗಳನ್ನು ಪ್ರಾರಂಭಿಸಬಹುದು.
7. ಯಾವುದೇ ಸಮಯದಲ್ಲಿ ಮಗುವನ್ನು ಸಾಂಸ್ಥೀಕರಿಸಬೇಕಾದರೆ ಪೋಷಕತ್ವದ ಆರ್ಥಿಕ ಬೆಂಬಲವನ್ನು ಸ್ಥಗಿತಗೊಳಿಸಬೇಕು.

**9. ಪಾಯೋಜಕತ್ವ ಮತ್ತು ಪೋಷಕತ್ವ ಅನೂಮೋದನಾ ಸಮಿತಿ –**

1. ಪ್ರತಿ ಜಿಲ್ಲೆಯೂ ಪ್ರಾಯೋಜಕತ್ವ (ತಡೆಗಟ್ಟುವ ಕ್ರಮಗಳಿಗೆ ಮಾತ್ರ) ಮತ್ತು ಪೋಷಕತ್ವ ನಿಧಿಯನ್ನು ಪರಿಶೀಲಿಸಲು ಮತ್ತು ಮಂಜೂರು ಮಾಡಲು ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿಯನ್ನು ಹೊಂದಿರಬೇಕು.

2. ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿಯ ರಚನೆಯನ್ನು ಕೆಳಗೆ ನೀಡಲಾಗಿದೆ.

ಅ) ಜಿಲ್ಲಾದಂಡಾಧಿಕಾರಿಗಳು, ಅಧ್ಯಕ್ಷರು.

ಆ) ಅಧ್ಯಕ್ಷರು / ಸದಸ್ಯರು ಮಕ್ಕಳ ಕಲ್ಯಾಣ ಸಮಿತಿ, ಸದಸ್ಯರು

ಇ) ಮಕ್ಕಳ ಪಾಲನ ಸಂಸ್ಥೆಯ / ವಿಶೇಷ ದತ್ತು ಕೇಂದ್ರದ ಪ್ರತಿನಿಧಿ, ಸದಸ್ಯರು.

ಈ) ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಸದಸ್ಯ ಕಾರ್ಯದರ್ಶಿ

ಉ) ರಕ್ಷಣಾಧಿಕಾರಿ (ಅಸಾಂಸ್ಥಿಕ), ಸದಸ್ಯರು.

ಊ) SFCACಯ ಯಾವುದೇ ನಿರ್ಧಾರವನ್ನು ಅಧ್ಯಕ್ಷರೂ ಸೇರಿದಂತೆ ನಾಲ್ಕು ಸದಸ್ಯರ ಕೋರಂ ಮೂಲಕ ತೆಗೆದುಕೊಳ್ಳಬಹುದು.

**10. ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿ (SFCAC)ಗೆ ತ್ರೈಮಾಸಿಕ ವರದಿಗಳ ಸಲ್ಲಿಕೆ :-**

ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿಯ ಮುಂದೆ DCPU ಪ್ರತಿ ಮಗುವಿನ ತ್ರೈಮಾಸಿಕ ವರದಿಗಳನ್ನು, ಪರಿಶೀಲನೆ ಮತ್ತು ಮಕ್ಕಳ ಕಲ್ಯಾಣ ಸಮಿತಿಗೆ ಶಿಫಾರಸ್ಸು ಮಾಡುವುದಕ್ಕಾಗಿ ಪ್ರಸ್ತುತಪಡಿಸುತ್ತದೆ.

**11. ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿಯ (SFCAC) ಪಾತ್ರಗಳು ಮತ್ತು ಜವಾಬ್ದಾರಿಗಳು –**

1. ಮಿಷನ್ ವಾತ್ಸಲ್ಯ 2022ರ ಅಡಿಯಲ್ಲಿ ಅವಕಾಶ ಕಲ್ಪಿಸಲಾಗಿರುವಂತೆ ಪ್ರಾಯೋಜಕತ್ವ ಮತ್ತು ಪೋಷಕತ್ವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮತ್ತು ಮೇಲ್ವಿಚಾರಣೆ ಮಾಡಲು ಪ್ರತಿ ಜಿಲ್ಲೆಯು ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿಯನ್ನು ಹೊಂದಿರಬೇಕು.

2. ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿಯು ಪ್ರತಿ ಶಿಫಾರಸ್ಸನ್ನು ಪರಿಶೀಲಿಸಿ, ಎಲ್ಲಾ ಅರ್ಹ ಪ್ರಕರಣಗಳಿಗೆ ಅನುಮೋದನೆ ನೀಡಿ, ನಂತರ ಅಂತಿಮ ಆದೇಶಕ್ಕಾಗಿ ಪ್ರಕರಣಗಳ ಅನುಸಾರ ಮಕ್ಕಳ ಕಲ್ಯಾಣ ಸಮಿತಿಗೆ ಶಿಫಾರಸ್ಸು ಮಾಡಬೇಕಾಗುತ್ತದೆ.

3. CWCಯಿಂದ ಅಂತಿಮ ಆದೇಶ ಸ್ವೀಕೃತವಾದ ಮೇಲೆ ಪ್ರಾಯೋಜಕತ್ವ ಮತ್ತು ಪೋಷಕತ್ವ ಬೆಂಬಲವನ್ನು ಮಂಜೂರು ಮಾಡುವ ಜವಾಬ್ದಾರಿ ಪ್ರತಿ ಜಿಲ್ಲೆಯ ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿಯದ್ದಾಗಿರುತ್ತದೆ.

4. SFCAC ಪ್ರತಿ ತಿಂಗಳು ಸಭೆ ನಡೆಸತಕ್ಕದ್ದು ಮತ್ತು ಕಾಲಮಿತಿಯೊಳಗೆ ಕಾರ್ಯ ನಿರ್ವಹಿಸಬೇಕಾಗುತ್ತದೆ ಮನವಿಯ ಮೇಲಿನ ನಿರ್ಣಯವನ್ನು ಅರ್ಜಿ ಸ್ವೀಕರಿಸಿದ 3 ತಿಂಗಳೊಳಗೆ ತಗೆದುಕೊಳ್ಳಬೇಕಾಗಿರುತ್ತದೆ.

5. ಮಗುವನ್ನು ಚೆನ್ನಾಗಿ ನೋಡಿಕೊಳ್ಳಲಾಗುತ್ತಿದೆಯೇ ಮತ್ತು ಉತ್ತಮ ಹೊಂದಣಿಕೆ ಇದೆಯೇ ಎಂದು ನಿರ್ಧರಿಸಲು SFCAC ಮೂಲಕ ಪ್ರಾಯೋಜಕತ್ವ / ಪೋಷಕತ್ವ ಬೆಂಬಲದ ಅಡಿಯಲ್ಲಿ ಪ್ರತಿ ಮಗುವಿಗೆ ವಾರ್ಷಿಕ ವಿಮರ್ಶೆಯನ್ನು ನಡೆಸಲಾಗುತ್ತದೆ ಮತ್ತು ಈ ವಿಮರ್ಶೆಯ ಆಧಾರದ ಮೇಲೆ ಮುಂದುವರೆದ ಪೋಷಕತ್ವ ಬೆಂಬಲಕ್ಕಾಗಿ ಅನುಮೋದನೆ ನೀಡಲಾಗುವುದು.

6. DCPU ಇತರೆ ಇಲಾಖೆಗಳ ಒಗ್ಗೂಡಿಸುವಿಕೆಯೊಂದಿಗೆ ಕುಟುಂಬ ಬಲವರ್ದನೆಗೆ ಸಾಕಷ್ಟು ಪ್ರಯತ್ನಗಳನ್ನು ಮಾಡಿದೆಯೇ ಎಂಬುದರ ಕುರಿತು SFCAC ಪರಿಶೀಲಿಸುತ್ತದೆ.

7. SFCAC ಕುಟುಂಬ ಆಧಾರಿತ ಪೋಷಕತ್ವ ಸೇವೆಯನ್ನು ಪರಿಶೀಲಿಸುತ್ತದೆ ಮತ್ತು ಮುಕ್ತಾಯಕ್ಕೆ ಶಿಫಾರಸ್ಸು ಮಾಡುತ್ತದೆ.

## ಅಧ್ಯಾಯ-2
## ಕುಟುಂಬ ಪೋಷಕತ್ವದ ಅರ್ಹತೆ ಮತ್ತು ಕಾರ್ಯವಿಧಾನ

**12. ಕುಟುಂಬ ಪೋಷಕತ್ವದಲ್ಲಿ ನಿಯೋಜಿಸಬಹುದಾದ ಮಕ್ಕಳ ಸಂಖ್ಯೆ:**

1. ಕುಟುಂಬ ಪೋಷಕತ್ವದಲ್ಲಿ ಮಗುವನ್ನು ಇರಿಸುವಾಗ ಈ ಕೆಳಗಿನ ಮಾನದಂಡಗಳನ್ನು ಅನುಸರಿಸಬೇಕು.

ಅ) ಕುಟುಂಬ ಪೋಷಕತ್ವದಲ್ಲಿ ಇರಿಸಲಾದ ಮಕ್ಕಳ ಸಂಖ್ಯೆಯು ಯಾವುದೇ ನಿರ್ದಿಷ್ಟ ಸಮಯದಲ್ಲಿ ನಿರೀಕ್ಷಿತ ಸಾಕು ಪೋಷಕರ ಜೈವಿಕ ಮಕ್ಕಳನ್ನು ಹೊರತು ಪಡಿಸಿ 2 ಮಕ್ಕಳನ್ನು ಮೀರಬಾರದು (ಒಡಹುಟ್ಟಿದವರಿಗೆ ವಿನಾಯ್ತಿ ಇರುತ್ತದೆ).

ಆ) ಕುಟುಂಬ ಪೋಷಕತ್ವದಲ್ಲಿ ಒಟ್ಟು ಮಕ್ಕಳ ಸಂಖ್ಯೆ ಜೈವಿಕ ಮಕ್ಕಳನ್ನೂ ಒಳಗೊಂಡಂತೆ 4 ಮಕ್ಕಳನ್ನು ಮೀರಬಾರದು (ಒಡಹುಟ್ಟಿದವರಿಗೆ ವಿನಾಯ್ತಿ ಇರುತ್ತದೆ).

ಇ). ನಿರೀಕ್ಷಿತ ಸಾಕು ಪೋಷಕರ ಈಗಾಗಲೇ ಜೈವಿಕ / ಪೋಷಕತ್ವ / ದತ್ತು ಪಡೆದ ಮಗುವು ವಿಶೇಷ ಅಗತ್ಯವುಳ್ಳದ್ದಾಗಿದ್ದರೆ ಮತ್ತೊಂದು ವಿಶೇಷ ಅಗತ್ಯವಿರುವ ಮಗುವಿಗೆ ಪರಿಗಣಿಸಲಾಗುವುದಿಲ್ಲ.

ಈ). ಒಡಹುಟ್ಟಿದವರು / ಅವಳಿ ಮಕ್ಕಳನ್ನು ಒಟ್ಟಿಗೆ ಇರಿಸಬೇಕು.

**13. ನಿರೀಕ್ಷಿತ ಸಾಕು ಪೋಷಕರಿಗೆ ಅರ್ಹತೆಯ ಮಾನದಂಡ:**

1. ನಿರೀಕ್ಷಿತ ಸಾಕು ಪೋಷಕರು ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಮತ್ತು ಆರ್ಥಿಕವಾಗಿ ಸಮರ್ಥರಾಗಿರಬೇಕು, ಅವರು ಯಾವುದೇ ಮಾರಣಾಂತಿಕ ವೈದ್ಯಕೀಯ ಸ್ಥಿತಿಯನ್ನು ಹೊಂದಿರಬಾರದು ಮತ್ತು ಯಾವುದೇ ರೀತಿಯ ಅಪರಾಧಿಕ ಕೃತ್ಯದಲ್ಲಿ ಶಿಕ್ಷೆಗೊಳಗಾಗಿರಬಾರದು ಅಥವಾ ಯಾವುದೇ ಮಕ್ಕಳ ಹಕ್ಕುಗಳ ಉಲ್ಲಂಘಣೆ ಪ್ರಕರಣದ ಆರೋಪವನ್ನು ಹೊಂದಿರಬಾರದು.
2. ಯಾವುದೇ ವ್ಯಕ್ತಿ(ಗಳು) ಅವರ ವೈವಾಹಿಕ ಸ್ಥಿತಿಯನ್ನು ಲೆಕ್ಕಿಸದೇ (ಒಂಟಿ / ಅವಿವಾಹಿತ/ ವಿಧವೆ / ವಿಧುರ / ವಿಚ್ಛೇಧಿತರು / ಕಾನೂನುಬದ್ಧವಾಗಿ ಬೇರ್ಪಟ್ಟವರು) ಮತ್ತು ಅವರಿಗೆ ಜೈವಿಕ ಮಗು ಇರಲಿ ಅಥವಾ ಇಲ್ಲದಿರಲಿ, ಈ ಕೆಳಗಿನ ರುಜುವಾತುಗಳಿಗೆ ಒಳಪಟ್ಟು ಮಗುವನ್ನು ಸಾಕಬಹುದು, ಅವುಗಳೆಂದರೆ –

ಅ) ವಿವಾಹಿತ ದಂಪತಿಗಳ ವಿಷಯದಲ್ಲಿ ಇಬ್ಬರೂ ಸಂಗಾತಿಗಳು ಭಾರತೀಯ ನಾಗರೀಕರಾಗಿರಬೇಕು.

ಆ)ವಿವಾಹಿತ ದಂಪತಿಗಳ ಸಂದರ್ಭದಲ್ಲಿ ಪೋಷಕತ್ವಕ್ಕೆ ಇಬ್ಬರೂ ಸಂಗಾತಿಗಳ ಒಪ್ಪಿಗೆ ಅಗತ್ಯವಿದೆ.

ಇ) ವಿವಾಹಿತ ದಂಪತಿಗಳ ಸಂದರ್ಭದಲ್ಲಿ ಇಬ್ಬರೂ ಸಂಗಾತಿಗಳು ಒಂದೇ ಮಗುವನ್ನು ಸಾಕಲು ಸಿದ್ಧರಿರಬೇಕು.

ಈ) ಒಂಟಿ ಮಹಿಳೆಯು ಯಾವುದೇ ಲಿಂಗದ ಮಗುವನ್ನು ಸಾಕಬಹುದು;

ಉ) ಒಂಟಿ ಪುರುಷನು ಹೆಣ್ಣು ಮಗುವನ್ನು ಸಾಕಲು ಅರ್ಹನಾಗಿರುವುದಿಲ್ಲ;

ಊ) 02 ವರ್ಷಗಳ ಸ್ಥಿರ ವೈವಾಹಿಕ ಸಂಬಂಧವನ್ನು ಹೊಂದಿರುವ ಕುರಿತು ಸಮಿತಿಗೆ ತೃಪ್ತಿಕರ ಅನಿಸದ ಹೊರತು ದಂಪತಿಗಳು / ಸಂಗಾತಿಗೆ ಮಗುವನ್ನು ಪೋಷಕತ್ವಕ್ಕೆ ನೀಡಬಾರದು;

ಋ) ನಿರೀಕ್ಷಿತ ಸಾಕು ಪೋಷಕರ ಅಂತಿಮ ಆಯ್ಕೆಯು ಮಗುವಿನ ಒಪ್ಪಿಗೆಯನ್ನು ಆಧರಿಸಿರುತ್ತದೆ;

ಎ) ನಿರೀಕ್ಷಿತ ಸಾಕು ಪೋಷಕರು ಮಗುವಿನ ಬೆಳವಣಿಗೆಗೆ ಅನುಕೂಲಕರವಾದ ಪ್ರೀತಿ, ಕಾಳಜಿಯ ಕೌಟುಂಬಿಕ ವಾತಾವರಣವನ್ನುಪೋಷಿಸಲು ಬದ್ಧರಾಗಿರಬೇಕು;

ಏ) ಗೊತ್ತುಪಡಿಸಲಾದ ಪೋರ್ಟಲ್‌ನಲ್ಲಿ ದತ್ತು ಪಡೆಯಲು ನೋಂದಾಯಿಸಿಕೊಂಡ ನಿರೀಕ್ಷಿತ ದತ್ತು ಪೋಷಕರು ಈ ಮಾರ್ಗಸೂಚಿಯ ಅನುಸಾರ ಪೋಷಕತ್ವಕ್ಕೆ ಅರ್ಹರಾಗಿರುವುದಿಲ್ಲ.

ಐ) ಮಗುವನ್ನು ಸಾಕಲು ವಯಸ್ಸಿನ ಮಾನದಂಡಗಳು ಕೆಳಕಂಡಂತಿದೆ:

| **ಮಗುವಿನ ವಯಸ್ಸು** | **ನಿರೀಕ್ಷಿತ ಸಾಕು ಪೋಷಕರ ಕನಿಷ್ಠ ವಯಸ್ಸು** | | **ನಿರೀಕ್ಷಿತ ಸಾಕು ಪೋಷಕರ ಗರಿಷ್ಠ ವಯಸ್ಸು** | |
|---|---|---|---|---|
| | **ದಂಪತಿಗಳ ಸಂಯೋಜಿತ ವಯಸ್ಸು** | **ಏಕ ಪೋಷಕರ ವಯಸ್ಸು** | **ದಂಪತಿಗಳ ಸಂಯೋಜಿತ ವಯಸ್ಸು** | **ಏಕ ಪೋಷಕರ ವಯಸ್ಸು** |
| 6 ವರ್ಷ ಮೇಲ್ಪಟ್ಟ ಮತ್ತು12 ವರ್ಷದವರೆಗಿನ | 70 ವರ್ಷಗಳು | 35 ವರ್ಷಗಳು | 110 ವರ್ಷಗಳು | 55 ವರ್ಷಗಳು |
| 12 ವರ್ಷ ಮೇಲ್ಪಟ್ಟ ಮತ್ತು 18 ವರ್ಷದವರೆಗಿನ | 70 ವರ್ಷಗಳು | 35 ವರ್ಷಗಳು | 115 ವರ್ಷಗಳು | 60 ವರ್ಷಗಳು |

ಪ್ರತಿ ಪೋಷಕರ ಕನಿಷ್ಠ ವಯಸ್ಸು 35 ವರ್ಷಗಳಿಗಿಂತ ಕಡಿಮೆಯಿರಬಾರದು.

14. **ಮಕ್ಕಳ ಗುರುತಿಸುವಿಕೆ ಮತ್ತು ಗೊತ್ತುಪಡಿಸಲಾದ ಪೋರ್ಟಲ್ ನಲ್ಲಿ ಮಕ್ಕಳ ನೋಂದಣಿ**:

1. ಮಕ್ಕಳ ಪಾಲನಾ ಸಂಸ್ಥೆಗಳ ಮಾಸಿಕ ಪರಿಶೀಲನೆ ಆಧಾರದ ಮೇಲೆ ಮಕ್ಕಳ ಕಲ್ಯಾಣ ಸಮಿತಿ / ಜಿಲ್ಲಾ ಮಕ್ಕಳ ರಕ್ಷಣಾ ಘಟಕವು, ಪೋಷಕತ್ವಕ್ಕೆ ಅರ್ಹ ಮತ್ತು ಶಿಫಾರಸ್ಸು ಮಾಡಬಹುದಾದ ಮಕ್ಕಳನ್ನು ಗುರುತಿಸುವುದು ಮತ್ತು ಗೊತ್ತುಪಡಿಸಲಾದ ಪೋರ್ಟಲ್ ನಲ್ಲಿ ನೋಂದಾಯಿಸುವುದು.
2. ಸಮುದಾಯದಲ್ಲಿ ವಾಸಿಸುತ್ತಿರುವ ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಕ್ಕಳನ್ನೂ ಸಹ **DCPU** ಫಾರಂ **31**ರಲ್ಲಿ ಸಿದ್ಧಪಡಿಸಿದ ಮಕ್ಕಳ ಅಧ್ಯಯನ ವರದಿಯ ಆಧಾರದ ಮೇಲೆ ಪೋಷಕತ್ವದಲ್ಲಿ ಇರಿಸಲು ಪರಿಗಣಿಸಬಹುದು. ಅಂತಹ ಮಕ್ಕಳನ್ನೂ ಸಹ ಗೊತ್ತುಪಡಿಸಲಾದ ಪೋರ್ಟಲ್‌ನಲ್ಲಿ ನೋಂದಾಯಿಸಬೇ**ಕು** ಮತ್ತು
3. ಫಾರಂ **22**ರಲ್ಲಿನ ಸಾಮಾಜಿಕ ತನಿಖಾ ವರದಿ, ಫಾರಂ 7 ರಲ್ಲಿನ ವೈಯುಕ್ತಿಕ ಪಾಲನಾ ಯೋಜನೆ, ಫಾರಂ **31**ರಲ್ಲಿ ಮಕ್ಕಳ ಅಧ್ಯಯನ ವರದಿ ಮತ್ತು ಮಗುವಿನ ಒಪ್ಪಿಗೆಯ ಆಧಾರದ ಮೇಲೆ **DCPU** ಪೋಷಕತ್ವದಿಂದ ಪ್ರಯೋಜನ ಹೊಂದಬಹುದಾದ ಮಕ್ಕಳನ್ನು ಗುರುತಿಸುತ್ತದೆ.

15. **ನಿರೀಕ್ಷಿತ ಸಾಕು ಪೋಷಕರಿಂದ ನೋಂದಣಿ –**

1. ಮಗುವನ್ನು ಪೋಷಿಸಲು ಸಿದ್ಧರಿರುವ ನಿರೀಕ್ಷಿತ ಸಾಕು ಪೋಷಕರು ಆನ್‌ಲೈನ್ ನಲ್ಲಿ ಗೊತ್ತುಪಡಿಸಲಾದ ಪೋರ್ಟಲ್ ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು
2. ನಿರೀಕ್ಷಿತ ಸಾಕು ಪೋಷಕರು ಈ ಮಾರ್ಗಸೂಚಿಯ ಷೆಡ್ಯೂಲ್ – 1ರಲ್ಲಿ ತಿಳಿಸಲಾಗಿರುವಂತೆ ಗೊತ್ತುಪಡಿಸಲಾಗಿರುವ ಪೋರ್ಟಲ್ ನಲ್ಲಿ ಎಲ್ಲಾ ಅಗತ್ಯ ದಾಖಲಾತಿಗಳನ್ನು ಅಪ್ಲೋಡ್ ಮಾಡುವುದು ಮತ್ತು ಅವರ ನೋಂದಣಿ ಪೂರ್ಣಗೊಂಡು DCPUಗೆ ಕಾಣಸಿಗುತ್ತದೆ.

16. **ಗೊತ್ತುಪಡಿಸಲಾದ ಪೋರ್ಟಲ್ ನಲ್ಲಿ ನೋಂದಾಯಿಸಿದ ನಂತರದಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ**:

1. ನೋಂದಣಿ ಪೂರ್ಣಗೊಂಡ ನಂತರ, ನಿರೀಕ್ಷಿತ ಸಾಕು ಪೋಷಕರ ಅರ್ಜಿಯನ್ನು DCPU ಪರಿಶೀಲಿಸಬೇಕು.
2. ಪರಿಶೀಲನೆ ಪೂರ್ಣಗೊಂಡ ನಂತರ, ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ)ರ ಫಾರಂ 30ರಲ್ಲಿ ತಿಳಿಸಲಾಗಿರುವಂತೆ ನಿರೀಕ್ಷಿತ ಸಾಕು ಪೋಷಕರ ಗೃಹ ಅಧ್ಯಯನ ವರದಿಯನ್ನು ಪೂರ್ಣಗೊಳಿಸಬೇಕು.
3. ನಿರೀಕ್ಷಿತ ಸಾಕು ಪೋಷಕರ ತವರು ಜಿಲ್ಲೆಯ DCPU, ಕುಟುಂಬದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಹಿನ್ನೆಲೆಯನ್ನು ಪರಿಗಣಿಸಿ ಗೃಹ ಅಧ್ಯಯನವನ್ನು ಕೈಗೊಳ್ಳುವುದು ಮತ್ತು ಗೊತ್ತುಪಡಿಸಲಾದ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡುವುದು.
4. ಈ ಹಂತದ ನಂತರ ನಿರೀಕ್ಷಿತ ಸಾಕು ಪೋಷಕರು ಈಗಾಗಲೇ ಆನ್‌ಲೈನ್‌ನಲ್ಲಿ ಲಭ್ಯವಿರುವ Immediate ಮತ್ತು Special Need ವರ್ಗಗಳ ಮಕ್ಕಳ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ ಮತ್ತು ಅಂತಹ ಮಗು / ಮಕ್ಕಳನ್ನು ಸಂದರ್ಭಾನುಸಾರ ಕಾಯ್ದಿರಿಸ ಬಹುದು .
5. ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ)ರಲ್ಲಿ ತಿಳಿಸಿರುವಂತೆ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ನೆಲೆಸಿರುವ ಪೋಷಕತ್ವಕ್ಕೆ ಅರ್ಹರಾಗಿರುವ ಮಕ್ಕಳ ಸಾಮಾಜಿಕ ತನಿಖಾ ವರದಿಯನ್ನು (SIR) ಫಾರಂ-22 ರಲ್ಲಿ, ವೈಯಕ್ತಿಕ ಪಾಲನಾ ಯೋಜನೆಯನ್ನು (ICP) ಫಾರಂ -07 ರಲ್ಲಿ ಹಾಗೂ ಸಮುದಾಯದಲ್ಲಿ ನೆಲಸಿರುವ ಪೋಷಕತ್ವಕ್ಕೆ ಅರ್ಹ ಮಕ್ಕಳ ಅಧ್ಯಯನ ವರದಿ (CSR) ವರದಿಯನ್ನು ಫಾರಂ-31 ರಲ್ಲಿ ಮತ್ತು ವೈಯಕ್ತಿಕ ಪಾಲನಾ ಯೋಜನೆಯನ್ನು ಫಾರಂ-07 ರಲ್ಲಿ ಮಕ್ಕಳ ಕಲ್ಯಾಣ ಸಮಿತಿಗೆ, ಆ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸಲ್ಲಿಸಬೇಕು.

6. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ನಿರೀಕ್ಷಿತ ಸಾಕು ಪೋಷಕರು ಹಾಗೂ ಆಯ್ಕೆಯಾದ ಮಗು / ಮಕ್ಕಳ ಸೂಕ್ತತೆ ಕುರಿತು ಮಕ್ಕಳ ಕಲ್ಯಾಣ ಸಮಿತಿಗೆ ಶಿಫಾರಸ್ಸು ಮಾಡಬೇಕು.
7. ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ)ರಲ್ಲಿ ತಿಳಿಸಲಾಗಿರುವಂತೆ, ಪೋಷಕತ್ವದ ಯಾವುದೇ ಪ್ರಕರಣಗಳನ್ನು ಅಂತಿಮಗೊಳಿಸುವ ಮೊದಲು, ನಿರೀಕ್ಷಿತ ಸಾಕು ಪೋಷಕರು ಫಾರಂ-33 ರಲ್ಲಿ ಹೊಣೆಗಾರಿಕೆಯ ಮುಚ್ಚಳಿಕೆ ಪತ್ರವನ್ನು ( Undertaking) ಸಲ್ಲಿಸಬೇಕಾಗಿರುತ್ತದೆ.
8. ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ)ರಲ್ಲಿ ತಿಳಿಸಲಾಗಿರುವಂತೆ, ಅಂತಿಮವಾಗಿ ಮಗು ಅಥವಾ ಮಕ್ಕಳನ್ನು ಫಾರಂ-32 ರಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಆದೇಶದೊಂದಿಗೆ ಪೋಷಕತ್ವದಲ್ಲಿ ಇರಿಸಲಾಗುವುದು.
9. ಸಾಧ್ಯವಾದಷ್ಟು ಮಟ್ಟಿಗೆ, ಮಗುವನ್ನು ಪೋಷಿಸಲು ಆರ್ಥಿಕವಾಗಿ ಸಮರ್ಥರಾಗಿರುವ ನಿರೀಕ್ಷಿತ ಸಾಕು ಪೋಷಕರೊಂದಿಗೆ ಮಗುವನ್ನು ಇರಿಸಲಾಗಿದೆ ಎಂಬುದನ್ನು ಮಕ್ಕಳ ಕಲ್ಯಾಣ ಸಮಿತಿಯು ಖಾತರಿ ಪಡಿಸಿಕೊಳ್ಳತಕ್ಕದ್ದು.
10. ನಿರೀಕ್ಷಿತ ಸಾಕು ಪೋಷಕರು ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿ ಮೂಲಕ ಆರ್ಥಿಕ ನೆರವಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಅಗತ್ಯ ಬೆಂಬಲಕ್ಕಾಗಿ ಪರಿಗಣಿಸಬೇಕಾಗಿರುತ್ತದೆ ಮತ್ತು ಸಂಬಂಧಿತ ಆದೇಶಗಳನ್ನು ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಬೇಕಾಗಿರುತ್ತದೆ.
11. ಸಮಿತಿಯು ಮಾಡಿದ ಆದೇಶದಿಂದ ಬಾಧಿತರಾದ ಯಾವದೇ ವ್ಯಕ್ತಿಯು ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 (2021 ರಲ್ಲಿ ತಿದ್ದುಪಡಿ ಮಾಡಿದಂತೆ), ಸೆಕ್ಷನ್ 101ರ ಪ್ರಕಾರ ಜಿಲ್ಲಾ ದಂಡಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಬಹುದು ಮತ್ತು
12. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಬೆಂಗಾವಲು ವ್ಯವಸ್ಥೆಯೊಂದಿಗೆ ಮಗುವನ್ನು ನಿರೀಕ್ಷಿತ ಪೋಷಕರಿಗೆ ತಲುಪಿಸುತ್ತದೆ ಮತ್ತು ನಿರೀಕ್ಷಿತ ಸಾಕು ಪೋಷಕರು ಮನವಿ ಮಾಡಿದ್ದಲ್ಲಿ ಮಗುವನ್ನು ಅವನ / ಅವಳ ವಾಸ ಸ್ಥಳದ ಹತ್ತಿರದ ಶಾಲೆಯಲ್ಲಿ ದಾಖಲಿಸಲು ಸಹಾಯ ಮಾಡತಕ್ಕದ್ದು.

17. **ಪೋಷಕತ್ವವನ್ನು ಮುಕ್ತಾಯಗೊಳಿಸುವುದು**:

1. ಮಕ್ಕಳ ಕಲ್ಯಾಣ ಸಮಿತಿಯು ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿಯ ಶಿಫಾರಸ್ಸುಗಳು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವರದಿಯನ್ನು ಪರಿಗಣಿಸಿದ ನಂತರ ಪೋಷಕತ್ವವನ್ನು ಮುಕ್ತಾಯಗೊಳಿಸುವ ಹಕ್ಕನ್ನು ಹೊಂದಿದೆ.
2. ಪೋಷಕತ್ವವನ್ನು ಮುಕ್ತಾಯಗೊಳಿಸುವ ಮುನ್ನ ಸಾಕು ಕುಟುಂಬಕ್ಕೆ ಲಿಖಿತವಾಗಿ ನೋಟೀಸನ್ನು ನೀಡಿ ಅವರ ಅಭಿಪ್ರಾಯವನ್ನು ಪರಿಗಣಿಸತಕ್ಕದ್ದು.
3. ಮಕ್ಕಳ ಕಲ್ಯಾಣ ಸಮಿತಿಯು ಒಮ್ಮೆ ಪರಿಶೀಲನೆ ನಡೆಸಿದ ನಂತರ ಮತ್ತು ಸಾಕು ಕುಟುಂಬ / ಗುಂಪು ಪೋಷಕ ಕುಟುಂಬದ ಆರೈಕೆದಾರರಿಗೆ ಸೂಕ್ತ ನೋಟೀಸನ್ನು ಜಾರಿಗೊಳಿಸಿ, ಮಗುವನ್ನು ಸೂಕ್ತವಾದ ಇನ್ನೊಂದು ಸಾಕು ಕುಟುಂಬದಲ್ಲಿ ಇರಿಸುವ ಅಥವಾ ಇನ್ನೊಂದು ಗುಂಪು ಪೋಷಕತ್ವ ಪೋಷಣೆಯಲ್ಲಿ ಇರಿಸುವ ಅಥವಾ ಮಕ್ಕಳ ಪಾಲನಾ ಸಂಸ್ಥೆಯಲ್ಲಿ ಇರಿಸುವ ಆದೇಶದೊಂದಿಗೆ, ದಿನಾಂಕ ಮತ್ತು ಕಾರಣಗಳನ್ನು ದಾಖಲಿಸಿ, ಪೋಷಕತ್ವವನ್ನು ಮುಕ್ತಾಯಗೊಳಿಸಲು ಆದೇಶಿಸುವುದು.
4. ಪೋಷಕತ್ವದ ಮುಕ್ತಾಯವು ಈ ಕೆಳಗಿನ ಸಂದರ್ಭದಲ್ಲಿ ಸಂಭವಿಸಬಹುದು:

ಅ) ಮಗುವಿಗೆ 18 ವರ್ಷ ವಯಸ್ಸಾದಾಗ, ಪೋಷಕತ್ವವು ಮುಕ್ತಾಯವಾಗಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ಮಗುವಿಗೆ After Care / ಅನುಪಾಲನಾ ಸೇವೆಗಳನ್ನು ಪಡೆಯಲು ಅವಕಾಶವಿದೆ ಮತ್ತು ಅಂತಹ ಸಂದರ್ಭಗಳಲ್ಲಿ ಆರ್ಥಿಕ ಬೆಂಬಲಕ್ಕಾಗಿ ಮಗು ಮತ್ತು ಸಾಕು ಪೋಷಕರ ಹೆಸರಿನಲ್ಲ ತೆರೆಯಲಾಗಿದ್ದ ಬ್ಯಾಂಕ್ ಖಾತೆಯನ್ನು ಮಗುವಿನ ಹೆಸರಿಗೆ ವರ್ಗಾಯಿಸತಕ್ಕದ್ದು.

ಆ) ಜೈವಿಕ ಪೋಷಕರ ಅಲಭ್ಯತೆಯಿಂದಾಗಿ ಪೋಷಕತ್ವದಲ್ಲಿ ಇರಿಸಿದ್ದಾಗ (ಸೆರೆವಾಸ ಅಥವಾ ಮಾನಸಿಕ

ಅಸ್ವಸ್ಥತೆಯ ಚಿಕಿತ್ಸೆಗಾಗಿ ಸಾಂಸ್ಥೀಕರಣ), ಜೈವಿಕ ಪೋಷಕರು ಲಭ್ಯರಾದಾಗ ಮತ್ತು ಸಮಿತಿಗೆ ಮಗುವನ್ನು ವಶಕ್ಕೆ ನೀಡಲು ಮನವಿ ಮಾಡಿದಾಗ, ಅಂತಹ ಎಲ್ಲಾ ಪ್ರಕರಣಗಳಲ್ಲಿ ಪೋಷಕತ್ವವನ್ನು ಮುಕ್ತಾಯಗೊಳಿಸಬಹುದು. ಜೈವಿಕ ಪೋಷಕರೊಂದಿಗೆ ಮಗುವಿನ ಮರುಸೇರ್ಪಡೆ ಸೂಕ್ತವೆಂದು ಪರಿಗಣಿತವಾದರೆ ಮಕ್ಕಳ ಕಲ್ಯಾಣ ಸಮಿತಿಯು ನಿರ್ದಿಷ್ಟ ಆದೇಶವನ್ನು ಹೊರಡಿಸಬೇಕು.

ಇ) ಕಾನೂನು ಬದ್ಧವಾಗಿ ದತ್ತು ಮುಕ್ತಗೊಂಡ 6 ವರ್ಷ ಮೇಲ್ಪಟ್ಟ ಮಗು ಪೋಷಕತ್ವದಲ್ಲಿದ್ದ ಸಮಯದಲ್ಲಿ, ಸೂಕ್ತವಾದ ದತ್ತು ಕುಟುಂಬವು ದೊರೆತ ಸಂದರ್ಭದಲ್ಲಿ, ಮಗುವಿನ ಒಪ್ಪಿಗೆಯನ್ನು ಪಡೆದು ಪೋಷಕತ್ವವನ್ನು ಮುಕ್ತಾಯಗೊಳಿಸಬಹುದಾಗಿದೆ.

ಈ) ಮಗುವಿನಿಂದ, ಸಂಬಂಧಿಕರಿಂದ ಅಥವಾ ಸಮುದಾಯದ ಸದಸ್ಯರಿಂದ ದೂರು ಸ್ವೀಕೃತವಾದಾಗ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಸೂಕ್ತ ವಿಚಾರಣೆಯ ನಂತರದಲ್ಲಿ ಪೋಷಕತ ಕಟುಂಬ ಅಥವಾ ಗುಂಪು ಪೋಷಕತ್ವದ ಮನೆ ಭೇಟಿ ಸಂದರ್ಭದಲ್ಲಿ ಈ ಕೆಳಕಂಡ ಅಂಶಗಳು ಗಮನಕ್ಕೆ ಬಂದರೆ :

- **i)** ಮಗುವು ಶಾಲೆಗೆ ಹೋಗುವುದನ್ನು ನಿಲ್ಲಿಸಿದ್ದರೆ ಅಥವಾ ಶಾಲೆಯಲ್ಲಿ ಮಗುವಿನ ಹಾಜರಾತಿ ಶೇ.75%ಗಿಂತ ಕಡಿಮೆಯಿದ್ದರೆ (ಮಗುವಿನ ಅಂಗವೈಕಲ್ಯ ಅಥವಾ ಅನಾರೋಗ್ಯದಂತಹ ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ)
- **ii)** ಮಗುವು ದೈಹಿಕ, ಭಾವನಾತ್ಮಕ, ಲೈಂಗಿಕ ಹಿಂಸೆಗೆ ಗುರಿಯಾಗಿದ್ದರೆ / ಒಳಗಾಗುತ್ತಿದ್ದರೆ ಮತ್ತು / ಪೋಷಕ ಕುಟುಂಬದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರೆ.
- **iii)** ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಿ ಮಗುವಿನಿಂದ ದುಡಿಸಿಕೊಳ್ಳಲಾಗಿದೆ ಅಥವಾ ಮಗು ದುಡಿಮೆಯಲ್ಲಿ ನಿರತವಾಗಿದೆ.
- **iv)** ಪೋಷಕರು / ಆರೈಕೆದಾರರಿಂದ ಕುಟುಂಬ ಅಥವಾ ಗುಂಪು ಪೋಷಕತ್ವದ ಆರ್ಥಿಕ ಬೆಂಬಲದ ದುರುಪಯೋಗ;
- **v)** ಆಪ್ತ ಸಮಾಲೋಚನೆಯ ಹೊರತಾಗಿಯೂ ಪೋಷಕ ಕುಟುಂಬ ಅಥವಾ ಗುಂಪು ಪೋಷಕತ್ವದ ಆರೈಕೆದಾರರು ಮತ್ತು ಮಗು ಹೊಂದಿಕೊಳ್ಳಲು ಸಾಧ್ಯವಾಗದಿದ್ದಲ್ಲಿ;
- **vi)** ಪೋಷಕ ಕುಟುಂಬ ಅಥವಾ ಗುಂಪು ಪೋಷಕತ್ವದ ಆರೈಕೆದಾರರು ಮಗುವಿನ ಸಾಮಾಜಿಕ, ಭಾವನಾತ್ಮಕ ಮತ್ತು ಅಭಿವೃದ್ಧಿಯ ಅಗತ್ಯಗಳನ್ನು ಸಮರ್ಪಕವಾಗಿ ಪೂರೈಸಲು ಇನ್ನು ಮುಂದೆ 'ಸರಿಹೊಂದುವುದಿಲ್ಲ' ಅನಿಸಿದರೆ.
- **vii)** ಗುಂಪು ಪೋಷಕತ್ವದಲ್ಲಿ ಮಗುವಿಗೆ ಹೊಂದಿಕೊಳ್ಳಲು ಸಾಧ್ಯವಾಗುತ್ತಿಲ್ಲ ಮತ್ತು ವಿಶೇಷ ಬೆಂಬಲದ ಅಗತ್ಯವಿದೆ ( ಉದಾ. ವ್ಯಸನಮುಕ್ತಗೊಳಿಸುವ ಸೌಲಭ್ಯಗಳು);
- **viii)** ಸಾಕು ಪೋಷಕರ ಮರಣ, ವಿಚ್ಛೇದನ ಅಥವಾ ಬೇರ್ಪಡುವಿಕೆಯಿಂದಾದ ಅಡಚಣೆಯಿಂದ, ಮಕ್ಕಳ ಕಲ್ಯಾಣ ಸಮಿತಿಯಿಂದ ಇನ್ನೊಂದು ಕುಟುಂಬ ಅಥವಾ ಗುಂಪಿನ ಪೋಷಕತ್ವಕ್ಕೆ ಮುಂದಿನ ಆದೇಶ ಮಾಡುವವರೆಗೆ ಮಗುವನ್ನು ಮಕ್ಕಳ ಪಾಲನಾ ಸಂಸ್ಥೆಗೆ ಹಿಂದಿರುಗಿಸಲಾಗುತ್ತದೆ.
- **ix)** ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ಮಕ್ಕಳ ಕಲ್ಯಾಣ ಸಮಿತಿಯಿಂದ ಗಮನಿಸಿದ ಮಗುವಿನ ಯೋಗಕ್ಷೇಮಕ್ಕೆ ಸೂಕ್ತವಲ್ಲ ಎಂದು ಪರಿಗಣಿಸಬಹುದಾದ ಯಾವದೇ ಇತರೆ ಕಾರಣ.

## ಅಧ್ಯಾಯ III
## Foster Adoption / ಪೋಷಕ ದತ್ತು ಸ್ವೀಕಾರ

### 18. ಪೋಷಕತ್ವದಿಂದ ಪೋಷಕ ದತ್ತುವಿನೆಡೆಗೆ:

1. ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 (2021 ರಲ್ಲಿ ತಿದ್ದುಪಡಿ ಮಾಡಿದಂತೆ)ಯ ಸೆಕ್ಷನ್ 3(xii) ಮತ್ತು ದತ್ತು ಸ್ವೀಕಾರ ನಿಯಮಗಳು 2022ರ ನಿಯಮ 35 (2) (h) ರಲ್ಲಿ ದತ್ತು ಮತ್ತು ಇತರೆ ಅಸಾಂಸ್ಥಿಕ ಕಾರ್ಯಕ್ರಮಗಳ ಮೂಲಕ ಆರಂಭದಲ್ಲಿಯೇ ಮಕ್ಕಳನ್ನು ಅಸಾಂಸ್ಥೀಕರಣಗೊಳಿಸುವುದಕ್ಕೆ ಒತ್ತು

ನೀಡಲಾಗಿದೆ.

2. ಮುಂದುವರೆದು, ದತ್ತು ಸ್ವೀಕಾರ ನಿಯಮಗಳು 2022ರ ನಿಯಮ 53(1) ರಲ್ಲಿ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರವು, ದತ್ತು ಕಷ್ಟ ಸಾಧ್ಯ( Hard to Place) ಮಕ್ಕಳನ್ನು ಪೋಷಕತ್ವದ ಮೂಲಕ ದತ್ತು ನೀಡುವುದಕ್ಕೆ ಎಲ್ಲಾ ಹೆಚ್ಚುವರಿ ಪ್ರಯತ್ನಗಳನ್ನು ಮಾಡಲು ಕಡ್ಡಾಯಗೊಳಿಸಿದೆ.
3. ಪೋಷಕತ್ವದ ಅವಧಿಯಲ್ಲಿ, ಮಗುವು ಪೋಷಕ ಕುಟುಂಬದೊಂದಿಗೆ ಚನ್ನಾಗಿ ಹೊಂದಾಣಿಕೆ ಹೊಂದಿದ್ದರೆ, 2 ವರ್ಷಗಳ ನಂತರ ದತ್ತು ಪ್ರಕ್ರಿಯೆ ಪ್ರಾಂಭಿಸಲು ಪೋಷಕ ಕುಟುಂಬ ಮತ್ತು ಮಗುವು ಒಪ್ಪಿಗೆ ನೀಡಿದಲ್ಲಿ, ತೃಪ್ತಿದಾಯಕ ಅನುಸರಣಾ ವರದಿಗಳಿಗೆ ಒಳಪಟ್ಟು, ಪೋಷಕ ಕುಟುಂಬವು ಮಗುವನ್ನು ಶಾಶ್ವತವಾಗಿ ದತ್ತು ಪಡೆಯುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದಾಗಿದೆ.

4. ದತ್ತು ಸ್ವೀಕಾರ ನಿಯಮಾವಳಿಗಳಲ್ಲಿ ನಿಗದಿಪಡಿಸಲಾಗಿರುವಂತೆ, ಸೂಕ್ತ ಕಾರ್ಯವಿಧಾನಗಳನ್ನು ಅನುಸರಿಸಿ ಪೋಷಕತ್ವದಲ್ಲಿರುವ ಮಗುವನ್ನು ಕಾನೂನುಬದ್ಧವಾಗಿ ದತ್ತುಮುಕ್ತಗೊಳಿಸಿದ ತರುವಾಯ, ಪೋಷಕ ಕುಟುಂಬಕ್ಕೆ ಅದೇ ಮಗುವನ್ನು ದತ್ತು ನೀಡಲು ಆದ್ಯತೆ ನೀಡಲಾಗುವುದು.

**19. ಪೋಷಕತ್ವದಲ್ಲಿ ಇರಿಸಿದ ತರುವಾಯ ಪೋಷಕ ದತ್ತುವಿಗೆ ಅರ್ಹರಾಗಿರುವ ಮಕ್ಕಳು:** ಕನಿಷ್ಠ ಎರಡು ವರ್ಷಗಳ ಕಾಲ ಒಂದೇ ಪೋಷಕ ಕುಟುಂಬದಲ್ಲಿ ಉಳಿದಿರುವ ಮತ್ತು ಕಾನೂನು ಬದ್ಧವಾಗಿ ದತ್ತು ಮುಕ್ತಗೊಡಿರುವ ಎಲ್ಲಾ ಮಕ್ಕಳು.

**20. ಪೋಷಕ ದತ್ತುವಿಗೆ ಅರ್ಹವಾಗಿರುವ ಪೋಷಕ ಕುಟುಂಬ :** ಮಗುವನ್ನು ಈಗಾಗಲೇ ಕನಿಷ್ಠ ಎರಡು ವರ್ಷಗಳಿಂದ ಪೋಷಿಸುತ್ತಿರುವ ಮತ್ತು ಅದೇ ಮಗುವನ್ನು ದತ್ತು ತೆಗೆದುಕೊಳ್ಳಲು ಸಿದ್ದರಿರುವ ಪೋಷಕ ಕುಟುಂಬ ದತ್ತು ಸ್ವೀಕರಿಸಲು ಅರ್ಹರಿರುತ್ತಾರೆ.

**21. ಪೋಷಕ ದತ್ತು ಸ್ವೀಕಾರಕ್ಕೆ ನೋಂದಣಿ:** ತಮ್ಮ ಪೋಷಕತ್ವದಲ್ಲಿರುವ ಅದೇ ಮಗುವನ್ನು ದತ್ತು ತೆಗೆದುಕೊಳ್ಳ ಬಯಸುವಂತಹ ಪೋಷಕ ಕುಟುಂಬವು ಈ ಕೆಳಗಿನ ಮಾಹಿತಿಯನ್ನು ನೇರವಾಗಿ ಅಥವಾ ಸಂಬಂಧಿಸಿದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೂಲಕ ನವೀಕರಿಸುವ ಅಗತ್ಯವಿದೆ:

ಎ) ನಿವಾಸದ ಪುರಾವೆ (ಆಧಾರ್ ಕಾರ್ಡ್ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಪಾಸ್ ಪೋರ್ಟ್ ಅಥವಾ ಹಾಲೀ ವಿದ್ಯುತ್ ಬಿಲ್ ಅಥವಾ ದೂರವಾಣಿ ಬಿಲ್);

ಬಿ) ಕಳೆದ ವರ್ಷದ ಆದಾಯ ಪುರಾವೆ (ಸಂಬಳ ಚೀಟಿ ಅಥವಾ ಸರ್ಕಾರಿ ಇಲಾಖೆ ನೀಡಿದ ಆದಾಯ ಪ್ರಮಾಣ ಪತ್ರ ಅಥವಾ ಆದಾಯ ತರಿಗೆ ರಿಟರ್ನ್ಸ್)

ಸಿ) ವಿವಾಹ ಪ್ರಮಾಣ ಪತ್ರ ಅಥವಾ ವಿಚ್ಛೇದನದ ತೀರ್ಪು ಅಥವಾ ಸಕ್ಷಮ ನ್ಯಾಯಾಲಯದಿಂದ ಘೋಷಣೆ ಅಥವಾ ವಿಚ್ಛೇದನದ ತೀರ್ಪು ಕಡ್ಡಾಯವಲ್ಲದ, ವೈಯುಕ್ತಿಕ ಕಾನೂನಿನ ಮೂಲಕ ವಿಚ್ಛೇದನ ಪಡೆದ ಸಂದರ್ಭದಲ್ಲಿ ಪ್ರಮಾಣ ವಚನದ ಅಫಿಡವಿಟ್ ಅಥವಾ ಸಂಗಾತಿ ಮರಣ ಪ್ರಮಾಣ ಪತ್ರ, ಯಾವುದು ಅನ್ವಯಿಸುತ್ತದೆಯೋ ಅದು.

ಡಿ) ಏಕ ನಿರೀಕ್ಷಿತ ಸಾಕು ಪೋಷಕರ ಪ್ರಕರಣದಲ್ಲಿ ಸಂಬಂಧಿಯಿಂದ ಹೊಣೆಗಾರಿಕೆಯ ಮುಚ್ಚಳಿಕೆ / undertaking (ಅನ್ವಯಿಸಿದರೆ);

ಇ) ಜೈವಿಕ ಅಥವಾ ದತ್ತು ಮಗುವಿನ ಒಪ್ಪಿಗೆ (ಮಗು 5 ವರ್ಷ ಮೇಲ್ಪಟ್ಟದ್ದಾಗಿದ್ದರೆ) ಮತ್ತು

ಎಫ್) ಅದೇ ಕುಟುಂಬದಲ್ಲಿ ದತ್ತು ಹೋಗಲು ಇಚ್ಚಿಸುವ ಸಾಕು ಮಗುವಿನ ಒಪ್ಪಿಗೆ.

22. **ನೋಂದಣಿ ನಂತರ ಅನುಸರಿಸಬೇಕಾದ ಕಾರ್ಯವಿಧಾನ-**

1. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಅರ್ಜಿಯನ್ನು ಪರಿಶೀಲಿಸಬೇಕು ಮತ್ತು ದತ್ತು ಸ್ವೀಕಾರ ನಿಯಮಾವಳಿಗಳ ಷೆಡ್ಯೂಲ್ VIIರಲ್ಲಿ ತಿಳಿಸಿರುವಂತೆ ಗೃಹ ಅಧ್ಯಯನ ವರದಿಯನ್ನು ಪೂರ್ಣಗೊಳಿಸಬೇಕು ಮತ್ತು ಗೊತ್ತುಪಡಿಸಿದ ಪೋರ್ಟಲ್ ನಲ್ಲಿ ಅಪ್ಲೋಡ್ ಮಾಡಬೇಕು;
2. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು, ದತ್ತು ಸ್ವೀಕಾರ ನಿಯಮಾವಳಿಗಳ ಷೆಡ್ಯೂಲ್ IIರಲ್ಲಿ ತಿಳಿಸಿರುವಂತೆ

ಮಕ್ಕಳ ಅಧ್ಯಯನ ವರದಿ, ಷೆಡ್ಯೂಲ್IIIರಲ್ಲಿ ವೈದ್ಯಕೀಯ ಪರೀಕ್ಷೆಯ ವರದಿಯನ್ನೂ ಸಹ ಪೂರ್ಣಗೊಳಿಸಿ, ಮಕ್ಕಳ ಕಲ್ಯಾಣ ಸಮಿತಿಯು ಕಾನೂನು ಬದ್ಧವಾಗಿ ದತ್ತು ಮುಕ್ತಗೊಳಿಸಿದ ಪ್ರಮಾಣ ಪತ್ರ ಮತ್ತು ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮ 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ)ರ ಫಾರಂ 35ರಲ್ಲಿ, ಪೋಷಕ ಕುಟುಂಬದ ಕಳೆದ ತಿಂಗಳ ತಪಾಸಣಾ ವರದಿ, ಎಲ್ಲವನ್ನೂ ಗೊತ್ತುಪಡಿಸಲಾದ ಪೋರ್ಟಲ್ ನಲ್ಲಿ ಅಪ್ಲೋಡ್ ಮಾಡತಕ್ಕದ್ದು;

3. ಸಮಗ್ರ ಪರಿಶೀಲನೆಯ ನಂತರ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಪ್ರಕರಣವನ್ನು ತನ್ನ ಅಭಿಪ್ರಾಯದೊಂದಿಗೆ ರಾಜ್ಯ ದತ್ತು ಸಂಪನ್ಮೂಲ ಕೇಂದ್ರಕ್ಕೆ(SARA) ಸಲ್ಲಿಸಬೇಕು**;**

4. SARA ತನ್ನ ಶಿಫಾರಸ್ಸನ್ನು **ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರಕ್ಕೆ (**CARA) ಸಲ್ಲಿಸಬೇಕು ಮತ್ತು CARA ಪೂರ್ವ ಅನುಮೋದನಾ ಪತ್ರವನ್ನು ನೀಡಿ SARA **ಗೆ** ಕಳುಹಿಸಿಕೊಡಬೇಕು**;**

5. ಜಿಲ್ಲಾ ದಂಡಾಧಿಕಾರಿಗಳ ಮುಂದೆ ದತ್ತು ಆದೇಶಕ್ಕಾಗಿ ಅರ್ಜಿಯನ್ನು ಸಲ್ಲಿಸಲು **ಜಿಲ್ಲಾ ಮಕ್ಕಳ ರಕ್ಷಣಾ ಘಟಕದ** ಮುಂದಿನ ಕ್ರಮಕ್ಕೆ**, ರಾಜ್ಯ ದತ್ತು ಸಂಪನ್ಮೂಲ ಕೇಂದ್ರವು** ಪ್ರಕರಣವನ್ನು ಮುಂದಕ್ಕೆ ಕಳುಹಿಸಿಕೊಡತಕ್ಕದ್ದು**.**

6. ತದನಂತರದಲ್ಲಿ ಜಿಲ್ಲಾ ದಂಡಾಧಿಕಾರಿಗಳು ದತ್ತು ಆದೇಶವನ್ನು ಹೊರಡಿಸಬೇಕು ಮತ್ತು ಅದನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಗೊತ್ತುಪಡಿಸಲಾದ ಪೋರ್ಟಲ್ ನಲ್ಲಿ ಅಪ್ಲೋಡ್ ಮಾಡಲಾಗುತ್ತದೆ**.**

7. ದತ್ತು ಸ್ವೀಕಾರ ನಿಯಮಾವಳಿಗಳಲ್ಲಿ ತಿಳಿಸಲಾಗಿರುವಂತೆ**,** ದತ್ತು ನಂತರದ ಅನುಸರಣೆಯನ್ನು 02 ವರ್ಷಗಳ ಅವಧಿಯವರೆಗೆ ಕೈಗೊಂಡು ಪೂರ್ಣಗೊಳಿಸಬೇಕು**.**

## **ಅಧ್ಯಾಯ** IV
## **ಗುಂಪು ಪೋಷಕತ್ವದ ಕಾರ್ಯವಿಧಾನ**

### 23**. ಗುಂಪು ಪೋಷಕತ್ವದ ನೋಂದಣಿ:**

1. ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮ 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ)ಗಳ ನಿಯಮ 21 A ರಲ್ಲಿ ಅವಕಾಶ ಕಲ್ಪಿಸಲಾಗಿರುವಂತೆ ಪ್ರತಿ ಗುಂಪು ಪೋಷಕತ್ವವನ್ನೂ ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 (2021 ರಲ್ಲಿ ತಿದ್ದುಪಡಿ ಮಾಡಿದಂತೆ)ರಡಿ ನೋಂದಾಯಿಸಬೇಕು ಮತ್ತು ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮ 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ)ಗಳ ನಿಯಮ 23(13) ರಲ್ಲಿ ತಿಳಿಸಲಾಗಿರುವಂತೆ ಗುಂಪು ಪೋಷಕತ್ವ ವ್ಯವಸ್ಥೆಗಳನ್ನು ಆಯ್ಕೆ ಮಾಡುವಾಗ ಈ ಕೆಳಗಿನ ಮಾನದಂಡಗಳನ್ನುಅನುಸರಿಸಬೇಕು;
2. ಗುಂಪು ಪೋಷಕತ್ವ ವ್ಯವಸ್ಥೆಯು ಮಕ್ಕಳ ರಕ್ಷಣಾ ನೀತಿಯನ್ನು ಹೊಂದಿರಬೇಕು;
3. ಮಕ್ಕಳಿಗಾಗಿ ಸಾಕಷ್ಟು ಸ್ಥಳಾವಕಾಶ ಮತ್ತು ಸೌಕರ್ಯಗಳನ್ನು ಹೊಂದಿರಬೇಕು;
4. ಗುಂಪು ಪೋಷಕತ್ವದಲ್ಲಿ ಜೈವಿಕ ಮಕ್ಕಳನ್ನೂ ಸೇರಿದಂತೆ 8ಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ಯಾವುದೇ ವ್ಯವಸ್ಥೆಯನ್ನು ಮಕ್ಕಳ ಪಾಲನಾ ಸಂಸ್ಥೆಯೆಂದು ನೋಂದಾಯಿಸಬೇಕು.
5. ಗುಂಪು ಪೋಷಕತ್ವದ ನಿವಾಸಿ ಆರೈಕೆದಾರರೆಲ್ಲರೂ ವೈದ್ಯಕೀಯವಾಗಿ ಸದೃಢರಾಗಿದ್ದಾರೆ ಎಂದು ನಿರ್ಧರಿಸಬಹುದಾದ HIV, TB ಮತ್ತು ಹೆಪಟೈಟಿಸ್ B ವರದಿಯನ್ನು ಒಳಗೊಂಡ ವೈದ್ಯಕೀಯ ಪರೀಕ್ಷಾ ವರದಿಯನ್ನು ಪಡೆದುಕೊಳ್ಳಬೇಕು.

### **24. ಗುಂಪು ಪೋಷಕತ್ವಕ್ಕಾಗಿ ಮಕ್ಕಳ ಸಂಖ್ಯೆ:**

ಯಾವುದೇ ಸಮಯದಲ್ಲಿ ಆರೈಕೆದಾರರ ಜೈವಿಕ ಮಕ್ಕಳೂ ಸೇರಿದಂತೆ ಗುಂಪು ಪೋಷಕತ್ವದಲ್ಲಿ, ಮಕ್ಕಳ ಸಂಖ್ಯೆ 8 ಮಕ್ಕಳನ್ನು ಮೀರಬಾರದು. ಒಡಹುಟ್ಟಿದವರನ್ನು ಅವರುಗಳ ಹಿತದೃಷ್ಟಿಯಿಂದ ಪ್ರತ್ಯೇಕವಾಗಿ ಇಡಬೇಕಾದ ವಿನಃ, ಪೋಷಕತ್ವದಲ್ಲಿ ಅವರನ್ನು ಒಟ್ಟಿಗೇ ಇರಿಸುವ ಎಲ್ಲಾ ಪ್ರಯತ್ನಗಳನ್ನೂ ಮಾಡತಕ್ಕದ್ದು.

**25. ಮಕ್ಕಳ ಕಲ್ಯಾಣ ಸಮಿತಿಯಿಂದ ಅಂತಿಮ ನಿಯೋಜನೆ ಆದೇಶ:**

1. ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ)ರಲ್ಲಿ ತಿಳಿಸಿರುವಂತೆ ಮಗುವು ಇರುವ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸಾಮಾಜಿಕ ತನಿಖಾ ವರದಿಯನ್ನು (SIR) ಫಾರಂ-22 ರಲ್ಲಿ, ವೈಯಕ್ತಿಕ ಪಾಲನಾ ಯೋಜನೆಯನ್ನು (ICP) ಫಾರಂ -07 ರಲ್ಲಿ ಮತ್ತು ಮಗುವಿನ ಅಧ್ಯಯನ ವರದಿಯನ್ನು ಫಾರಂ -31 ರಲ್ಲಿ ಮಕ್ಕಳ ಕಲ್ಯಾಣ ಸಮಿತಿಗೆ ಸಲ್ಲಿಸಬೇಕು.

4. ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ)ರಲ್ಲಿ ನಿಗದಿಪಡಿಸಲಾಗಿರುವಂತೆ, ಗುಂಪು ಪೋಷಕತ್ವದ ಯಾವುದೇ ಪ್ರಕರಣಗಳನ್ನು ಅಂತಿಮಗೊಳಿಸುವ ಮೊದಲು ಗುಂಪು ಪೋಷಕತ್ವದ ಪಾಲಕರು ಫಾರಂ-33 ರಲ್ಲಿ ಹೊಣೆಗಾರಿಕೆಯ ಮುಚ್ಚಳಿಕೆ ಪತ್ರವನ್ನು(undertaking) ಸಲ್ಲಿಸಬೇಕಾಗಿರುತ್ತದೆ.
5. ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ)ರಲ್ಲಿ ತಿಳಿಸಲಾಗಿರುವಂತೆ, ಅಂತಿಮವಾಗಿ ಮಗು ಅಥವಾ ಮಕ್ಕಳನ್ನು ಫಾರಂ -32 ರಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಆದೇಶದೊಂದಿಗೆ ಗುಂಪು ಪೋಷಕತ್ವದಲ್ಲಿ ಇರಿಸಲಾಗುವುದು.
6. ಅದೇ ರೀತಿಯಾಗಿ ಗುಂಪು ಪೋಷಕತ್ವಕ್ಕೆ ಮಗುವನ್ನು ಬೆಂಗಾವಲಿನೊಂದಿಗೆ ಕರೆದೊಯ್ದು ಇರಿಸಲು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ವ್ಯವಸ್ಥೆ ಮಾಡಿಕೊಳ್ಳಬೇಕು; ಮತ್ತು
7. ಗುಂಪು ಪೋಷಕತ್ವದ ಪಾಲಕರು ವಿನಂತಿ ಮಾಡಿದಲ್ಲಿ, ಮಗುವನ್ನು ಶಾಲೆಗೆ ದಾಖಲು ಮಾಡಲೂ ಸಹ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸಹಾಯವನ್ನು ಒದಗಿಸತಕ್ಕದ್ದು.

## ಅಧ್ಯಾಯ V
## ಮೇಲ್ವಿಚಾರಣೆ ಮತ್ತು ಸಂರಕ್ಷಣೆ

**26. ಪೋಷಕತ್ವದ ಒಪ್ಪಂದದ ಉಲ್ಲಂಘಣೆ ಪ್ರಕರಣಗಳಲ್ಲಿ ಕ್ರಮ ಜರುಗಿಸತಕ್ಕದ್ದು:**

1.ಪೋಷಕ ಕುಟುಂಬದ ಸದಸ್ಯರು ಅಥವಾ ಗುಂಪು ಪೋಷಕತ್ವದಲ್ಲಿನ ವ್ಯಕ್ತಿಗಳು ನೈತಿಕ ಕ್ಷೋಭೆಯನ್ನು ಒಳಗೊಂಡಿರುವ ಅಪರಾಧಕ್ಕೆ ಶಿಕ್ಷೆಗೊಳಗಾಗಿದ್ದರೆ ಮತ್ತು ಅಂತಹ ಶಿಕ್ಷೆಯನ್ನು ಹಿಂಪಡೆಯಲಾಗಿಲ್ಲ ಅಥವಾ ಅಂತಹ ಅಪರಾಧಕ್ಕಾಗಿ ಪೂರ್ಣ ಕ್ಷಮಾದಾನ ನೀಡಲಾಗಿಲ್ಲ;

2. ಪೋಷಕ ಕುಟುಂಬ ಅಥವಾ ಗುಂಪು ಪೋಷಕತ್ವದ ವ್ಯಕ್ತಿಗಳ ಮೇಲೆ ಮಕ್ಕಳ ಮೇಲೆ ದೌರ್ಜನ್ಯ ಅಥವಾ ಮಾನವ ಹಕ್ಕುಗಳ ಅಥವಾ ಮಕ್ಕಳ ಹಕ್ಕುಗಳ ಉಲ್ಲಂಘಣೆಯ ಕುರಿತು ದೂರುಗಳಿರುವುದು ರಾಜ್ಯ ಸರ್ಕಾರಕ್ಕೆ ವಿಚಾರಣೆಯ ಆಧಾರದ ಮೇಲೆ ಕಂಡುಬಂದಲ್ಲಿ.

**27. ಪೋಷಕತ್ವದಡಿಯಲ್ಲಿ ಇರವ ಮಗುವಿನ ಹಕ್ಕುಗಳು:**

1. ಮಕ್ಕಳ ಕಲ್ಯಾಣ ಸಮಿತಿಯು, ಜಿಲ್ಲಾ ಮತ್ತು ರಾಜ್ಯ ಕಾರ್ಯನಿರ್ವಾಹಕರ ಸಂಯೋಗದಲ್ಲಿ ಪೋಷಕತ್ವದಲ್ಲಿರುವ ಮಗುವಿನ ಉತ್ತಮ ಹಿತಾಸಕ್ತಿಯನ್ನು ಎತ್ತಿ ಹಿಡಿಯಲಾಗಿದೆ ಮತ್ತು ವೈಯುಕ್ತಿಕ ಪಾಲನಾ ಯೋಜನೆಯನ್ನು ಅಭಿವೃದ್ಧಿಪಡಿಸುವಾಗ ಹಾಗೂ ಪೋಷಕತ್ವದಲ್ಲಿರಿಸುವಾಗ ಮಗುವಿನ ಅಭಿಪ್ರಾಯವನ್ನು ಸಾಧ್ಯವಾದಷ್ಟು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳತಕ್ಕದ್ದು;

2. ಮಗುವಿಗೆ ಅವನ / ಅವಳ ಜೈವಿಕ ಕುಟುಂಬದ ಮಾಹಿತಿಯು ದೊರಕತಕ್ಕದ್ದು;

3. ಮಗುವಿಗೆ ಅವನ / ಅವಳ ಅಭಿವೃದ್ಧಿಗಾಗಿ ಲಭ್ಯವಿರುವ ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮಾಹಿತಿಯು ದೊರಕತಕ್ಕದ್ದು.

28. **ಪೋಷಕತ್ವದ ಮೇಲಿಚಾರಣೆ**:

1. ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ)ರಲ್ಲಿ ತಿಳಿಸಲಾಗಿರುವಂತೆ ಪ್ರತಿ ಮಗುವಿನ ದಾಖಲಾತಿಯನ್ನು ಫಾರಂ 35ರಲ್ಲಿ ನಿರ್ವಹಿಸತಕ್ಕದ್ದು;

2. ಪೋಷಕತ್ವ ಕುಟುಂಬಗಳು ಅಥವಾ ಆರೈಕೆದಾರರನ್ನು ಮಾಸಿಕ ತಪಾಸಣೆಗೊಳಪಡಿಸುವ ಮೂಲಕ, ಬಾಲ ನ್ಯಾಯ ನಿಯಮಗಳು 2022ರ ಫಾರಂ 35ರಂತೆ ಮಗುವಿನ ಯೋಗ ಕ್ಷೇಮವನ್ನು ಪರಿಶೀಲಿಸಬೇಕು.
3. ದೂರನ್ನು ದಾಖಲಿಸುವ ನಮೂನೆಯನ್ನು ಈ ಮಾರ್ಗಸೂಚಿಗಳ ಷೆಡ್ಯೂಲ್ 2ರಲ್ಲಿ ಇರಿಸಲಾಗಿದೆ.
4. ಪೋಷಕತ್ವಕ್ಕೆ ಸಂಬಂಧಿಸಿದ ಯಾವುದೇ ಇತರೆ ದಾಖಲಾತಿಗಳನ್ನು ಗೊತ್ತುಪಡಿಸಲಾದ ಪೋರ್ಟಲ್ ನಲ್ಲಿ ಅಪಲೋಡ್ ಮಾಡತಕ್ಕದ್ದು.

**29. ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ನಿರ್ವಹಿಸಬೇಕಾದ ದಾಖಲೆಗಳು:**

ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಈ ಕೆಳಕಂಡ ಭೌತಿಕ ಅಥವಾ ಗಣಕೀಕೃತ ದಾಖಲೆಗಳನ್ನು ನಿರ್ವಹಿಸತಕ್ಕದ್ದು:
ಎ) ಪೋಷಕತ್ವದಲ್ಲಿ ನಿಯೋಜಿಸಲಾದ ಮಗುವಿನ ವಿವರಗಳು : ಮಗುವಿನ ಛಾಯಾ ಚಿತ್ರ (ಪ್ರತಿ 06 ತಿಂಗಳಿಗೊಮ್ಮೆ ನವೀಕರಿಸಬೇಕು), ಮಗುವಿನ ಆಧಾರ್ ಸಂಖ್ಯೆ, ಜೈವಿಕ ಪೋಷಕರ ವಿವರಗಳು(ಲಭ್ಯವಿದ್ದಲ್ಲಿ), ಪೋಷಕತ್ವದಲ್ಲಿ ನಿಯೋಜಿಸಿದಾಗ ಮಗುವಿನ ವಯಸ್ಸು (ಲಭ್ಯವಿದ್ದಲ್ಲಿ ಜನನ ಪ್ರಮಾಣ ಪತ್ರ)
ಬಿ) ನಿಯೋಜನೆಯ ವಿವರಗಳು, ವ್ಯಕ್ತಿ ಅಥವಾ ಗುಂಪು, ಮಕ್ಕಳ ಕಲ್ಯಾಣ ಸಮಿತಿಯ ಆದೇಶದ ಅನುಸಾರ ನಿಯೋಜನೆ ದಿನಾಂಕ, ನಿಯೋಜನೆ ಅವಧಿ, ಪೋಷಕತ್ವದ ಅವಧಿಯ ವಿಸ್ತರಣೆ ಅಥವಾ ಮುಕ್ತಾಯಗೊಳಿಸಿರುವ ದಿನಾಂಕ ಮತ್ತು ಕಾರಣಗಳು, ಅನ್ವಯಿಸುವಂತೆ.
ಸಿ) ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿಯ ನಡವಳಿಯಂತೆ ಆರ್ಥಿಕ ಬೆಂಬಲಕ್ಕೆ ಕಾರಣಗಳೂ ಒಳಗೊಂಡಂತೆ ಪೋಷಕತ್ವ ಅನುದಾನದ ಪಾವತಿಯ ವಿವರಗಳು.
ಡಿ) ಪೋಷಕತ್ವದಲ್ಲಿ ನಿಯೋಜಿಸಲಾಗಿರುವ ಪ್ರತಿಯೊಂದು ಮಗುವಿನ ವೈಯುಕ್ತಿಕ ಕೇಸ್ ಫೈಲ್ ಇವುಗಳನ್ನು ಒಳಗೊಂಡಿಬೇಕು:

- i) ಮಗುವನ್ನು ರೆಫರ್ ಮಾಡಲಾದ ಮೂಲ
- ii) ನಿರೀಕ್ಷಿತ ಸಾಕು ಪೋಷಕರ ಗೃಹ ಅಧ್ಯಯನ ವರದಿ ( ಛಾಯಾ ಚಿತ್ರದೊಂದಿಗೆ)
- iii) ನಿರೀಕ್ಷಿತ ಸಾಕು ಪೋಷಕರು / ಅರ್ಹ ವ್ಯವಸ್ಥೆಯ ಆರೈಕೆದಾರರೊಂದಿಗೆ ಮಗುವನ್ನು ಹೊಂದಿಸಲಾಗಿರುವ ವರದಿ
- iv) ಮಗುವಿನ ಸಾಮಾಜಿಕ ತನಿಖಾ ವರದಿ
- v) ಮಗುವಿನ ಅಧ್ಯಯನ ವರದಿ
- vi) ವೈಯುಕ್ತಿಕ ಪಾಲನಾ ಯೋಜನೆ
- vii) ಮಕ್ಕಳ ಕಲ್ಯಾಣ ಸಮಿತಿಯ ನಿಯೋಜನೆ ಆದೇಶ
- viii) ಮಗುವಿನ, ಪೋಷಕ ಕುಟುಂಬದ, ಲಭ್ಯವಿದ್ದಲ್ಲಿ ಮಗುವಿನ ಜೈವಿಕ ಕುಟುಂಬದ ಮತ್ತು ಮಗುವಿನ ಶಾಲೆಯ ಪ್ರತಿ ಭೇಟಿಯ ದಾಖಲೆ (ಸಂಖ್ಯೆ ಮತ್ತು ಮಹತ್ವದ ವಿವರಗಳು)
- ix) ಅವನ / ಅವಳ ನಿಯೋಜನೆಗೆ ಸಂಬಂಧಿಸಿದಂತೆ ಮಗುವಿನ ಗ್ರಹಿಕೆ, ಅಭಿಪ್ರಾಯ ಮತ್ತು ಸಲಹೆಗಳ ದಾಖಲೆ
- x) ಗಮನಿಸಲಾದ ಅಂಶಗಳು, ಪಾಲನಾ ಯೋಜನೆಯನ್ನು ಅನುಸರಣೆ ಮಾಡುವಲ್ಲಿನ ಗುಣಮಟ್ಟ ಮತ್ತು ವ್ಯಾಪ್ತಿ, ಮಗುವಿನ ಬೆಳವಣಿಗೆಯ ಮೈಲಿಗಲ್ಲುಗಳು, ಶೈಕ್ಷಣಿಕ ಪ್ರಗತಿ ಮತ್ತು ಕೌಟುಂಬಿಕ ಪರಿಸರದಲ್ಲಿ ಯಾವುದೇ ಬದಲಾವಣೆಗಳು ಒಳಗೊಂಡಂತೆ ನಿಯೋಜನೆಯ ಎಲ್ಲಾ ಪರಿಶೀಲನೆಗಳ ದಾಖಲೆಗಳು
- xi) ನಿಯೋಜನೆಯ ವಿಸ್ತರಣೆ ಅಥವಾ ಮುಕ್ತಾಯದ ಸಂದರ್ಭದಲ್ಲಿ, ದಿನಾಂಕದ ದಾಖಲೆ ಮತ್ತು ಮುಕ್ತಾಯದ ಕಾರಣ
- xii) ಮಾಸಿಕ ತಪಾಸಣೆಯ ವರದಿ ( ಫಾರ್ಮ್ 35)

**30. ಮಾರ್ಗಸೂಚಿಗಳಿಗೆ ಸಡಿಲಿಕೆ ಮತ್ತು ವ್ಯಾಖ್ಯಾನ:**

1. ಅಸ್ತಿತ್ವದಲ್ಲಿರುವ ಕಾನೂನಿನಲ್ಲಿರುವ ಅವಕಾಶಗಳನ್ನು ಮತ್ತು ವ್ಯಾಖ್ಯಾನಗಳನ್ನು ಪರಿಗಣಿಸಿ ಈ

ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ; ಸಂಬಂಧಿತ ಕಾನೂನು ಮತ್ತು ನಿಯಮಗಳನ್ನು ರೆಫರ್ ಮಾಡುವುದು.
2. ಯಾವುದೇ ದ್ವಂದ್ವ ಅಥವಾ ವಿವಾದದ ಸಂದರ್ಭದಲ್ಲಿ, ಈ ಮಾರ್ಗಸೂಚಿಗಳನ್ನು ವ್ಯಾಖ್ಯಾನಿಸುವ ಅಧಿಕಾರವು ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಇರುತ್ತದೆ.

**31. ಕಾಲಮಿತಿಗೆ ನಿಷ್ಠರಾಗಿರುವುದು**:
ಪೋಷಕತ್ವ ಪ್ರಕ್ರಿಯೆಯಲ್ಲಿ ತೊಡಗಿರುವ ಎಲ್ಲಾ ಏಜೆನ್ಸಿಗಳು ಮತ್ತು ಅಧಿಕಾರಿಗಳು **ಷೆಡ್ಯೂಲ್ 4**ರಲ್ಲಿ ನಿರ್ದಿಷ್ಟಪಡಿಸಲಾಗಿರುವ ಕಾಲಮಿತಿಗೆ ಬದ್ಧರಾಗಿರಬೇಕು.

**32. ಕುಟುಂಬ ಪೋಷಕತ್ವಕ್ಕಾಗಿ ಸಂಭವನೀಯ ಮಕ್ಕಳ ಗುರುತಿಸುವಿಕೆ:**
ಅಂತಹ ಮಕ್ಕಳನ್ನು ಬಾಲ ನ್ಯಾಯ ಕಾಯ್ದೆಯ ಸೆಕ್ಷನ್ 2(14) ರಲ್ಲಿ ಅವಕಾಶ ಒದಗಿಸಿರುವಂತೆ ಮತ್ತು ಮಾರ್ಗಸೂಚಿಯ ಷೆಡ್ಯೂಲ್ 3ರ ಪ್ರಕಾರ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಗುರುತಿಸತಕ್ಕದ್ದು.

## ಅಧ್ಯಾಯ VI
## ಅಧಿಕಾರಿಗಳ ಮತ್ತು ಏಜೆನ್ಸಿಗಳ ಪಾತ್ರ

**33. ಜಿಲ್ಲಾ ದಂಡಾಧಿಕಾರಿಗಳ ಪಾತ್ರ**:
1. ಮಕ್ಕಳ ಕಲ್ಯಾಣ ಸಮಿತಿ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಮಾಹೆಯಾನ ಕೈಗೊಂಡ ಮಕ್ಕಳ ಪಾಲನಾ ಸಂಸ್ಥೆಗಳ ತಪಾಸಣೆಗಳು ಮತ್ತು ಮಕ್ಕಳ ಗುರುತಿಸುವಿಕೆಯನ್ನು, ಜಿಲ್ಲಾ ದಂಡಾಧಿಕಾರಿಗಳು ಪರಿಶೀಲಿಸಬೇಕು.
2. ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿಯ ಕಾರ್ಯಗಳು, ಪೋಷಕತ್ವದಲ್ಲಿ ಮಕ್ಕಳನ್ನು ನಿಯೋಜಿಸಲಾಗಿರುವ ಕುರಿತೂ ಸಹ ಜಿಲ್ಲಾ ದಂಡಾಧಿಕಾರಿಗಳು ಪರಿಶೀಲಿಸಬೇಕು ಮತ್ತು ಬಾಲ ನ್ಯಾಯ ಕಾಯ್ದೆಯ, ಸೆಕ್ಷನ್ 101ರ ಪ್ರಕಾರ ಮೇಲ್ಮನವಿಗಳನ್ನು ಪರಿಹರಿಸಬೇಕು.

**34. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪಾತ್ರ:**
1. ಜಿಲ್ಲೆಯಲ್ಲಿ ಮಕ್ಕಳಿಗೆ ಸೇವೆಗಳು ತಲುಪುವುದನ್ನು ಮತ್ತು ಪಾಲನೆ ಮತ್ತು ರಕ್ಷಣೆಯನ್ನು ಖಾತ್ರಿಪಡಿಸಿಕೊಳ್ಳುವಲ್ಲಿ, ಜಿಲ್ಲಾ ದಂಡಾಧಿಕಾರಿಗಳ ಒಟ್ಟಾರೆ ಮೇಲ್ವಿಚಾರಣೆಯಲ್ಲಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಕಾರ್ಯನಿರ್ವಹಿಸುತ್ತದೆ;
2. ಜಿಲ್ಲಾ ಮಕ್ಕಳು ರಕ್ಷಣಾ ಘಟಕವು, ತಮ್ಮ ಆದ್ಯತೆಯ ಮಗುವನ್ನು ಪೋಷಕತ್ವದಲ್ಲಿ ತೆಗೆದುಕೊಳ್ಳಲು ಸಿದ್ಧರಿರುವ ಕುಟುಂಬಗಳನ್ನು ಗುರುತಿಸಬೇಕು. ಇದಕ್ಕಾಗಿ ಕುಟುಂಬ ಪೋಷಕತ್ವದಲ್ಲಿ ಆಸಕ್ತಿ ಹೊಂದಿರುವವರಿಂದ ಸ್ಥಳೀಯ ಪತ್ರಿಕೆಗಳಲ್ಲಿ ಅರ್ಜಿಯನ್ನು ಆಹ್ವಾನಿಸಿ ನಿಯಮಿತವಾಗಿ ಪ್ರಚಾರ ಮಾಡಬೇಕು;
3. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಮಾನದಂಡಗಳನ್ನು ಆಧರಿಸಿ ಮತ್ತು ಸಂದರ್ಶನವನ್ನು ಏರ್ಪಡಿಸಿ ಅರ್ಜಿದಾರರನ್ನು ಶಾರ್ಟ್ ಲಿಸ್ಟ್ ಮಾಡಿಕೊಳ್ಳಬೇಕು, ಇದು ನಿರೀಕ್ಷಿತ ಸಾಕು ಪೋಷಕರನ್ನು ನಿರ್ಧರಿಸಲು ಸಹಾಯ ಮಾಡುತ್ತದೆ;
4. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಪ್ರತಿ ನಿರೀಕ್ಷಿತ ಸಾಕು ಪೋಷಕರಿಂದ, ಸಮುದಾಯದಲ್ಲಿ ಉತ್ತಮ ಸ್ಥಾನಮಾನ ಹೊಂದಿರುವ ಇಬ್ಬರು ವ್ಯಕ್ತಿಗಳಿಂದ ಒದಗಿಸಲಾದ ಶಿಫಾರಸ್ಸುಗಳನ್ನು ಪರಿಶೀಲಿಸುತ್ತದೆ;
5. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಸಾಕು ಪೋಷಕರನ್ನು ನಿರ್ಧರಿಸುವಾಗ, ಅವರು ಮಗುವಿನ ಅಗತ್ಯಗಳನ್ನು ಪೂರೈಸಲು ಸಮರ್ಥರಾಗಿದ್ದಾರೆ ಮತ್ತು ಮಗುವಿನ ಪೋಷಕತ್ವ ನಿರ್ವಹಣಾ ವೆಚ್ಚದ ಮೇಲೆ ಅವಲಂಬಿತರಾಗಿಲ್ಲ ಎಂದು ಖಾತರಿಪಡಿಸಿಕೊಳ್ಳಲು ಅವರ ಆರ್ಥಿಕ ಸ್ಥಿತಿಗತಿಗಳನ್ನು ಸಂಪೂರ್ಣವಾಗಿ ಪರಿಶೀಲಿಸಬೇಕು; ಆದ್ಯಾಗ್ಯೂ ಎಲ್ಲಾ ಇತರೆ ಮಾನದಂಡಗಳು ತೃಪ್ತಿದಾಯಕವಾಗಿದೆ ಮತ್ತು ಆರ್ಥಿಕ ಬೆಂಬಲ ಮಾತ್ರ ಅಗತ್ಯವಿದೆ ಎಂದು ನಿರ್ಣಯಿಸಿದ್ದರೆ ಮತ್ತು ಪರ್ಯಾಯ ವ್ಯವಸ್ಥೆಗಳ ಅನುಪಸ್ಥಿತಿಯಲ್ಲಿ, ಮಕ್ಕಳ ಕಲ್ಯಾಣ ಸಮಿತಿಯ ಅಂತಿಮ ಆದೇಶ ನಂತರ, ಪ್ರಕರಣವನ್ನು ಈ ಉದ್ದೇಶಕ್ಕಾಗಿಯೇ ಜಿಲ್ಲೆಯಲ್ಲಿ ರಚನೆಯಾಗಿರುವ ಸಮಿತಿಗೆ, ಶಿಫಾರಸ್ಸು

ಮಾಡತಕ್ಕದ್ದು. ಅಗತ್ಯವಿದ್ದಲ್ಲಿ ಮಗುವಿನ ಉನ್ನತ ಅಭ್ಯಾಸಕ್ಕಾಗಿ, ನಂತರದಲ್ಲಿಯೂ ಸಹ ಆರ್ಥಿಕ ಬೆಂಬಲ ನೀಡಬಹುದಾಗಿರುತ್ತದೆ;

6. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ನಿರೀಕ್ಷಿತ ಸಾಕು ಕುಟುಂಬಗಳ ಪ್ರತ್ಯೇಕ ಸರದಿ ಪಟ್ಟಿ / ಪ್ಯಾನಲ್‌ನ್ನು ನಿರ್ವಹಿಸುತ್ತದೆ, ಈ ಮಾಹಿತಿ ಮತ್ತು ಗುಂಪು ಪೋಷಕತ್ವ ಒದಗಿಸಲು ಸಿದ್ಧರಿರುವ ಪಾಲಕರ ಮಾಹಿತಿಯನ್ನು ಮಕ್ಕಳನ್ನು ಪೋಷಕತ್ವದಲ್ಲಿ ನಿಯೋಜಿಸುವ ಸಲುವಾಗಿ ಪ್ರತಿ ವರ್ಷವೂ ಮಕ್ಕಳ ಕಲ್ಯಾಣ ಸಮಿತಿಗೆ ಒದಗಿಸುತ್ತದೆ;

7. ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಪೋಷಕತ್ವದಲ್ಲಿ ನಿಯೋಜಿಸುವ ಸಲುವಾಗಿ ಮಗುವನ್ನು ಸಿದ್ಧಪಡಿಸಲು ಪ್ರಾರಂಭಿಸಬೇಕು ಮತ್ತು ನಿರೀಕ್ಷಿತ ಸಾಕು ಪೋಷಕರು ಹಾಗೂ ಸಾಕು ಮಗುವಿನ ಹೊಂದಾಣಿಕೆ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು ಮತ್ತು ಅದಕ್ಕಾಗಿ ವರದಿಗಳನ್ನು, ಹೊಂದಾಣಿಕೆ ಪ್ರಕ್ರಿಯೆಯ ಸಮಯದಲ್ಲಿಯೇ ಸಮಾನಾಂತರವಾಗಿ ಭರ್ತಿ ಮಾಡಿ ಸಿದ್ಧಪಡಿಸಬೇಕು ಮತ್ತು ಮಕ್ಕಳ ಕಲ್ಯಾಣ ಸಮಿತಿಗೆ ಮುಖ ಪತ್ರದೊಂದಿಗೆ ಲಿಖಿತವಾಗಿ ಸಲ್ಲಿಸಬೇಕು;

8. ಕಾಲ ಕಾಲಕ್ಕೆ ತಿದ್ದುಪಡಿ ಮಾಡಲಾದ ಬಾಲಾ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ನಿಯಮಗಳ ಅಡಿಯಲ್ಲಿ ತಿಳಿಸಲಾಗಿರುವಂತೆ ಮಕ್ಕಳ ರಕ್ಷಣಾ ಘಟಕವು ಕಾರ್ಯನಿರ್ವಹಿಸತಕ್ಕದ್ದು;

9. ಪೋಷಕತ್ವ ಮತ್ತು ದತ್ತು ಸ್ವೀಕಾರ ನಿಯಮಾವಳಿಗಳಲ್ಲಿ ವಿವರಿಸಿರುವಂತೆ ದತ್ತುವಿನ ಎಲ್ಲಾ ವಿಷಯಗಳನ್ನೂ ಒಳಗೊಂಡಂತೆ ಕುಟುಂಬ ಆಧಾರಿತ ಅಸಾಂಸ್ಥಿಕ ಸೇವೆಗಳ ಅನುಷ್ಠಾನವನ್ನು ಸುಗಮಗೊಳಿಸಬೇಕು;

10. ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಪ್ರತಿ ಮಗವು ವೈಯಕ್ತಿಕ ಪಾಲನಾ ಯೋಜನೆಯನ್ನು ಹೊಂದಿರಬೇಕು ಮತ್ತು ಯೋಜನೆಯನ್ನು ನಿಯಮಿತವಾಗಿ ಪರಿಶೀಲಿಸಲಾಗುತ್ತಿದೆ ಎಂದು ಖಾತರಿ ಪಡಿಸಿಕೊಳ್ಳುವುದು;

11. ಜಿಲ್ಲೆಯಲ್ಲಿ ಮಕ್ಕಳಿಗೆ ವಸತಿ ಸೌಲಭ್ಯಗಳನ್ನು ಒದಗಿಸುವ ಎಲ್ಲಾ ಸಂಸ್ಥೆಗಳು / ಏಜೆನ್ಸಿಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ;

12. ಎಲ್ಲಾ ಹಂತಗಳಲ್ಲಿ ಮಕ್ಕಳನ್ನು ಅವರ ಕುಟುಂಬಗಳಿಗೆ ಮರುಸ್ಥಾಪಿಸಲು ಅಥವಾ ಪೋಷಕತ್ವದ ಮೂಲಕ ದೀರ್ಘಕಾಲಿಕ ಅಥವಾ ಅಲ್ಪಕಾಲಿಕ ಪುರ್ನವಸತಿಗೆ ಕ್ರಮವಹಿಸಲುವ ಸಲುವಾಗಿ ಮಕ್ಕಳನ್ನು ವರ್ಗಾಯಿಸಲು ಅನುಕೂಲ ಮಾಡಿಕೊಡಬೇಕು;

13. ಮಕ್ಕಳಿಗೆ ಪರಿಣಾಮಕಾರಿ ಸೇವೆಗಳನ್ನು ಒದಗಿಸಲು ಮಕ್ಕಳ ರಕ್ಷಣಾ ವ್ಯವಸ್ಥೆಯ ಅಡಿಯಲ್ಲಿ ಕೆಲಸ ನಿರ್ವಹಿಸುವ ಎಲ್ಲಾ ಸಿಬ್ಬಂದಿಗಳಿಗೆ (ಸರ್ಕಾರಿ ಮತ್ತು ಸರ್ಕಾರೇತರ) ತರಬೇತಿ ನೀಡುವುದು ಮತ್ತು ಸಾಮರ್ಥ್ಯ ನಿರ್ಮಾಣ ಮಾಡುವುದು. ಜಿಲ್ಲೆ, ಬ್ಲಾಕ್ ಮತ್ತು ಸಮುದಾಯ ಮಟ್ಟದಲ್ಲಿ ಮಕ್ಕಳ ರಕ್ಷಣಾ ಕಾರ್ಯಕ್ರಮದಲ್ಲಿ ಸ್ವಯಂ ಪ್ರೇರಿತ ಯುವಜನರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವುದು;

14. ಪೋಷಕತ್ವ ಕಾರ್ಯಕ್ರಮದ ಅನುಷ್ಠಾನವೂ ಸೇರಿದಂತೆ ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ನಡೆಸುವುದು;

15. ಪೋಷಕತ್ವ ಕಾರ್ಯಕ್ರಮಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ನಿರ್ವಹಿಸುವುದು ಮತ್ತು ಜಿಲ್ಲೆಯ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳು ಹಾಗೂ ವಿಶೇಷ ದತ್ತು ಕೇಂದ್ರಗಳ ಸಂಪರ್ಕ ಬಿಂದುವಾಗಿ ಕಾರ್ಯನಿರ್ವಹಿಸುವುದು;

16. ವಿಶೇಷ ದತ್ತು ಕೇಂದ್ರಗಳು ಮತ್ತು ಪಾಲನಾ ಸಂಸ್ಥೆಗಳ ಸಹಾಕರದೊಂದಿಗೆ ಮಕ್ಕಳ ಕಲ್ಯಾಣ ಸಮಿತಿ, ಸ್ವಯಂ ಸೇವಾ ಸಂಸ್ಥೆಗಳು, ಪೋಷಕ ಕುಟುಂಬಗಳು / ಆರೈಕೆದಾರರು ಮುಂತಾದ ಜಿಲ್ಲೆಯ ಪೋಷಕತ್ವ ಕಾರ್ಯಕ್ರಮದ ಭಾಗೀದಾರರಿಗೆ ಬೆಂಬಲ, ತರಬೇತಿ ಮತ್ತು ಸಾಮರ್ಥ್ಯ ವೃದ್ಧಿಗೊಳಿಸುವುದು;

17. ಮಗುವಿಗೆ 18 ವರ್ಷ ತುಂಬುವರೆಗೆ ಮಗುವಿನ ವಿವರಗಳು ಹಾಗೂ ಸಾಕು ಪೋಷಕರ ವಿವರಗಳನ್ನು ಒಳಗೊಂಡಂತೆ ಮತ್ತು ಎಲ್ಲಾ ಪೋಷಕತ್ವ ನಿಯೋಜನೆಗಳ (ಕುಟುಂಬ ಮತ್ತು ಗುಂಪು ಪೋಷಕತ್ವ ನಿಯೋಜನೆಗಳು) ಡೇಟಾ ಬೇಸ್‌ನ್ನು ಸರ್ಕಾರವು ಅಭಿವೃದ್ಧಿ ಪಡಿಸಿದ ಪೋರ್ಟಲ್‌ನಲ್ಲಿ ನಿರ್ವಹಿಸುವುದು;

18. ಮಗುವಿಗೆ 18 ವರ್ಷ ತುಂಬಿದಾಗ ಜಂಟಿ ಬ್ಯಾಂಕ್ ಖಾತೆಯನ್ನು ಮಗುವಿನ ಹೆಸರಿಗೆ ವರ್ಗಾಯಿಸುವುದು;

19. ತನಿಖೆಗಳು ಮತ್ತು ಮಧ್ಯಸ್ಥಿಕೆಗಳು ಇತ್ಯಾದಿಗಳ ಮೂಲಕ ದೂರುಗಳನ್ನು ಪರಿಹರಿಸುವುದು;

20. ಜಿಲ್ಲೆಯಲ್ಲಿ ಪೋಷಕತ್ವ ಕಾರ್ಯಕ್ರಮದ ನಿಯಮಿತ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ;

21. ಹಿಂದಿನ ಅಧ್ಯಾಯಗಳಲ್ಲಿ ವಿವರಿಸಿರುವ ಒಂದು ಅಥವಾ ಹೆಚ್ಚಿನ ಕಾರಣಗಳಿಗಾಗಿ ಮಕ್ಕಳ ಕಲ್ಯಾಣ ಸಮಿತಿಗೆ ಪೋಷಕತ್ವ ನಿಯೋಜನೆಯನ್ನು ಮುಕ್ತಾಯಗೊಳಿಸಲು ಶಿಫಾರಸ್ಸು ಮಾಡುವುದು;
22. ಪೋಷಕತ್ವದಲ್ಲಿ ಮಗುವಿನ ಪ್ರಗತಿಯು ತೃಪ್ತಿಕರವಾಗಿದೆ ಮತ್ತು ಮಗುವನ್ನು ಅವನ / ಅವಳ ಜೈವಿಕ ಪೋಷಕರೊಂದಿಗೆ ಮರು ಒಗ್ಗೂಡಿಸುವುದು ಸೇರಿದಂತೆ ಇತರೆ ಪರ್ಯಾಯ ಆಯ್ಕೆಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಪೋಷಕತ್ವ ನಿಯೋಜನೆಯನ್ನು ವಿಸ್ತರಣೆ ಮಾಡಲು ಶಿಫಾರಸ್ಸು ಮಾಡುವುದು;
23. ಮಂಡಳಿ ಅಥವಾ ಸಮಿತಿ ನಿರ್ದೇಶನದಂತೆ ಪ್ರತಿ ಮಗುವಿಗೆ ಸಾಮಾಜಿಕ ತನಿಖಾ ವರದಿ, ಮಕ್ಕಳ ಅಧ್ಯಯನ ವರದಿ ಮತ್ತು ವೈಯಕ್ತಿಕ ಪಾಲನಾ ಯೋಜನೆಯನ್ನು ಮಂಡಳಿ ಅಥವಾ ಸಮಿತಿಯ ನಿರ್ದೇಶನದಂತೆ ತಯಾರಿಸುವುದು;
24. ಮಂಡಳಿ ಅಥವಾ ಸಮಿತಿಯ ಅಥವಾ ಮಕ್ಕಳ ನ್ಯಾಯಾಲಯದ ಆದೇಶಗಳ ಅನುಸಾರ ಅಸಾಂಸ್ಥಿಕ ಕಾರ್ಯಕ್ರಮಗಳು, ಪೋಷಕತ್ವ ಮತ್ತು ಅನುಪಾಲನಾ ಸೇವೆಗಳ ಅನುಷ್ಠಾನಕ್ಕೆ ಬೆಂಬಲ ನೀಡುವುದು;
25. ತೆರೆದ ತಂಗುದಾಣಗಳ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿರುವ ಮಕ್ಕಳ ಮಾಹಿತಿ, ಪೋಷಕತ್ವದಲ್ಲಿ ನಿಯೋಜನೆಗೊಂಡ ಮಕ್ಕಳ ಮಾಹಿತಿ ಹಾಗೂ ಸಾಂಸ್ಥಿಕ ಆರೈಕೆಯಲ್ಲಿ ಕಾಣೆಯಾದ ಮಕ್ಕಳ ಜಿಲ್ಲಾ ಮಟ್ಟದ ದತ್ತಾಂಶ ನಿರ್ವಹಣೆ ಮಾಡುವುದು ಮತ್ತು ಈ ಮಾಹಿತಿಯನ್ನು ಗೊತ್ತುಪಡಿಸಲಾದ ಪೋರ್ಟಲ್ / Track Child Portal / ಖೋಯಾ ಪಾಯಾ ಪೋರ್ಟಲ್‌ಗಳಲ್ಲಿ ಅಪ್‌ಲೋಡ್ ಮಾಡುವುದು;
26. ಜಿಲ್ಲಾ ಮಟ್ಟದಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳು, ವಿಶೇಷ ದತ್ತು ಕೇಂದ್ರಗಳು, ತೆರೆದ ತಂಗುದಾಣಗಳು, ನೋಂದಾಯಿತ ನಿರೀಕ್ಷಿತ ಸಾಕು ಪೋಷಕರು, ಅನುಪಾಲಾನ ಗೃಹಗಳು ಮತ್ತು ಸಂಸ್ಥೆಗಳು ಇತ್ಯಾದಿ database ನಿರ್ವಹಿಸುವುದು ಮತ್ತು ಸಂದರ್ಭಾನುಸಾರ ಮಂಡಳಿ, ಸಮಿತಿ, ಮಕ್ಕಳ ನ್ಯಾಯಾಲಯ ಮತ್ತು ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ / ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ಮಾಹಿತಿ ಒದಗಿಸುವುದು;
27. ಕಾಯ್ದೆಯ ಅನುಷ್ಠಾನ ಮತ್ತು ಪ್ರಗತಿಯನ್ನು ಪರಿಶೀಲಿಸಲು ಜಿಲ್ಲೆಯ ಎಲ್ಲಾ ಭಾಗೀದಾರರೊಂದಿಗೆ ತ್ರೈಮಾಸಿಕ ಸಭೆಯನ್ನು ಹಮ್ಮಿಕೊಳ್ಳುವುದು
28. ತನಿಖಾ ಸಮಿತಿಗಳಿಂದ ಸಲ್ಲಿಕೆಯಾದ ವರದಿಗಳನ್ನು ಪರಿಶೀಲಿಸುವುದು ಮತ್ತು ಭಾಗೀದಾರರ ನಡುವೆ ಸಮನ್ವಯತೆಯ ಕೊರತೆಯಿಂದ ಉದ್ಭವಿಸಿದ ಸಮಸ್ಯೆಗಳನ್ನು ಪರಿಹರಿಸುವುದು.
29. ಎಲ್ಲಾ ಪ್ರಕರಣದ ವಿವರಗಳು, ಕಾರ್ಯವಿಧಾನಗಳನ್ನು ಗೊತ್ತುಪಡಿಸಲಾದ ಪೋರ್ಟಲ್ ನಲ್ಲಿ ಕಾಲಕಾಲಕ್ಕೆ ಅಪ್ಲೋಡ್ ಮಾಡುವುದು.

**35. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯ ಪಾತ್ರ:**

1. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಉಸ್ತುವಾರಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಎಲ್ಲಾ ದಿನನಿತ್ಯದ ಕಾರ್ಯಗಳ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ;
2. DCPUನ ಮುಖ್ಯಸ್ಥರಾಗಿರುವ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯು ಪ್ರಾಯೋಜಕತ್ವ ಕಾರ್ಯಕ್ರಮದ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಬೇಕು ಮತ್ತು ಅಸಾಂಸ್ಥಿಕ ರಕ್ಷಣಾಧಿಕಾರಿಯಿಂದ ಚಾಲ್ತಿಯಲ್ಲಿರುವ ಪ್ರಕರಣಗಳ ನಿಯಮಿತ ವರದಿಯನ್ನು ಪಡೆದುಕೊಳ್ಳಬೇಕು;
3. ಕುಟುಂಬ ಮತ್ತು ಗುಂಪು ಪೋಷಕತ್ವವನ್ನು ಆಯ್ಕೆಮಾಡಿಕೊಳ್ಳುವ ನಿರೀಕ್ಷಿತ ಸಾಕು ಪೋಷಕರ / ಅರ್ಹ ವ್ಯವಸ್ಥೆಗಳ ಸರದಿ ಪಟ್ಟಿಯನ್ನು ನಿರ್ವಹಿಸಬೇಕು;
4. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯು ಕಾಲಕಾಲಕ್ಕೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಲ್ಲಿ ಕಾರ್ಯ ನಿರ್ವಹಿಸುವ ಸಂರಕ್ಷಣಾಧಿಕಾರಿಗಳು, ಆಪ್ತಸಮಾಲೋಚಕರು ಮತ್ತು ಇತರೆ ಸಿಬ್ಬಂದಿಗಳು ನಿರ್ವಹಿಸುವ ಪ್ರಕರಣಗಳನ್ನು ವಿಮರ್ಶಿಸಿ, ನಿಗದಿಪಡಿಸಲಾದ ಕಾಲಮಿತಿಯೊಳಗೆ ನಿರ್ವಹಣೆ ಮಾಡುವುದಕ್ಕೆ ಬದ್ಧರಾಗಿರುವುದನ್ನು ಖಚಿತ ಪಡಿಸಿಕೊಳ್ಳಬೇಕು;
5. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯು ಕುಂಟುಬ ಮತ್ತು ಗುಂಪು ಪೋಷಕತ್ವವನ್ನು ಆಯ್ಕೆ ಮಾಡಿಕೊಳ್ಳುವ ಪೋಷಕರು / ಆರೈಕೆದಾರರಿಗೆ ಮತ್ತು ಮಕ್ಕಳಿಗೆ ಅವರ ಜವಾಬ್ದಾರಿ ಮತ್ತು ಪೋಷಕತ್ವ ಕಾರ್ಯಕ್ರಮದಡಿಯಲ್ಲಿ

ಲಾಭ್ಯವಿರುವ ಬೆಂಬಲದ ಕುರಿತು ಮಾರ್ಗದರ್ಶನ ನೀಡುವುದು;
6. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯು SFCACಗೆ ತ್ರೈಮಾಸಿಕ ವರದಿಯನ್ನು ಮತ್ತು ಮಕ್ಕಳ ರಕ್ಷಣಾ ನಿರ್ದೇಶನಾಲಯಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದು.

**36. ರಕ್ಷಣಾಧಿಕಾರಿ (PO - NIC) ಮತ್ತು ರಕ್ಷಣಾಧಿಕಾರಿ (PO - IC ) ಇವರ ಪಾತ್ರ:**

1. ರಕ್ಷಣಾಧಿಕಾರಿ (ಅಸಾಂಸ್ಥಿಕ) ಇವರು ವೈಯಕ್ತಿಕ ಮತ್ತು ಗುಂಪು ಪೋಷಕತ್ವದ ಜವಾಬ್ದಾರಿಯನ್ನು ಹೊಂದಿರುತ್ತಾರೆ ಮತ್ತು ಈ ಮಾರ್ಗಸೂಚಿಯ ಹಿಂದಿನ ಅಧ್ಯಾಯಗಳಲ್ಲಿ ತಿಳಿಸಿರುವಂತೆ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ವಾಸಿಸುವ ಪೋಷಕತ್ವಕ್ಕೆ ಅರ್ಹ ಮಕ್ಕಳ ಪ್ರಕರಣಗಳನ್ನು ಗುರುತಿಸುವಲ್ಲಿ ಸಾಂಸ್ಥಿಕ ರಕ್ಷಣಾಧಿಕಾರಿಯ ಬೆಂಬಲವನ್ನು ಹೊಂದಿರುತ್ತಾರೆ;

2. ರಕ್ಷಣಾಧಿಕಾರಿ (PO - NIC) ಮತ್ತು ರಕ್ಷಣಾಧಿಕಾರಿ (PO - IC) ಅರ್ಹ ಮಕ್ಕಳನ್ನು ಗುರುತಿಸಲು ದಾಖಲೆಗಳನ್ನು ಪರಿಶೀಲಿಸಬೇಕು ಮತ್ತು ಮಕ್ಕಳ ಹಿತದೃಷ್ಟಿಯಿಂದ ಇಬ್ಬರೂ ಸಮನ್ವಯತೆಯಿಂದ ಕೆಲಸ ಮಾಡಬೇಕು;

3. ರಕ್ಷಣಾಧಿಕಾರಿ (PO - IC) ಇವರು ಮಕ್ಕಳ ರಕ್ಷಣಾ ಸಮಸ್ಯೆಗಳ ವಿವಿಧ ಆಯಾಮಗಳ ಅನುಸಾರ ಸಂಸ್ಥೆಗಳಲ್ಲಿನ ಮಕ್ಕಳ ಸಂಖ್ಯೆ, ಬೆಂಬಲ ಅಗತ್ಯವಿರುವ ಮಕ್ಕಳ ಸಂಖ್ಯೆ ಮತ್ತು ಅವರಿಗೆ ಅಗತ್ಯವಿರುವ ಸೇವೆಗಳ ಮಾಹಿತಿಯನ್ನು ಸಂಗ್ರಹಿಸಿ ಕ್ರೋಢೀಕರಿಸಬೇಕು;

4. ಸರ್ಕಾರವು ಸ್ಥಾಪಿಸಿದ ಪೋರ್ಟಲ್‌ನಲ್ಲಿ ಮಕ್ಕಳ ಟ್ರ್ಯಾಕಿಂಗ್ ವ್ಯವಸ್ಥೆಯ ಸ್ಥಾಪನೆ ಮತ್ತು ನಿರ್ವಹಣೆಯನ್ನು ರಕ್ಷಣಾಧಿಕಾರಿಗಳು (PO - IC ), ಇವರು ಖಾತರಿ ಪಡಿಸಕೊಳ್ಳಬೇಕು;

5. ಸಾಕು ಕುಟುಂಬದ ಗೃಹ ಅಧ್ಯಯನ ವರದಿಯನ್ನು ಸಿದ್ಧಪಡಿಸುವುದು, ಮಗುವಿನ ಅಗತ್ಯತೆಗಳನ್ನು ನಿರ್ಧರಿಸಿದ ನಂತರ ಮಗುವಿನ ಅಗತ್ಯತೆಯೊಂದಿಗೆ ನಿರೀಕ್ಷಿತ ಸಾಕು ಪೋಷಕರು ಅಥವಾ ಗುಂಪು ಪೋಷಕತ್ವದ ಆರೈಕೆದಾರೊಂದಿಗೆ ಹೊಂದಿಸುವುದು ರಕ್ಷಣಾಧಿಕಾರಿ (PO - NIC) ಇವರ ಜವಾಬ್ದಾರಿಯಾಗಿರುತ್ತದೆ.

6. ಮಗುವಿನ ಪೋಷಕರು ಜೈಲಿನಲ್ಲಿರುವ ಪ್ರಕರಣಗಳಲ್ಲಿ ರಕ್ಷಣಾಧಿಕಾರಿ (PO - NIC) ಇವರು, ಮಗುವನ್ನು ಪೋಷಕತ್ವದಲ್ಲಿ ಇರಿಸಲು ಜೈಲಿನಲ್ಲಿರುವ ಪೋಷಕರ ಒಪ್ಪಿಗೆಯನ್ನು ಪಡೆಯಲು ಅವರನ್ನು ಸಂಪರ್ಕಿಸುತ್ತಾರೆ.

7. ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವ ಪೋಷಕರು ತಮ್ಮ ಮಗುವನ್ನು ಪೋಷಕತ್ವದಲ್ಲಿ ಇರಿಸಲು ವಿನಂತಿಸಿ ಮಕ್ಕಳ ಕಲ್ಯಾಣ ಸಮಿತಿಗೆ ಅರ್ಜಿ ಸಲ್ಲಿಸಿದಾಗ ರಕ್ಷಣಾಧಿಕಾರಿ (PO - NIC) ಇವರು ಅಗತ್ಯ ಕ್ರಮವಹಿಸುತ್ತಾರೆ.

8. ಪೋಷಕತ್ವಕ್ಕೆ ಶಿಫಾರಸ್ಸುಗೊಂಡಿರುವ ಮಕ್ಕಳ ಪಾಲನಾ ಸಂಸ್ಥೆಯಲ್ಲಿನ ಮತ್ತು ಸಂಸ್ಥೆಯ ಹೊರಗಿರುವ ಮಕ್ಕಳ ಸಂಯೋಜಿತ ಪಟ್ಟಿಯನ್ನು ರಕ್ಷಣಾಧಿಕಾರಿ (PO - NIC) ಇವರು ತಯಾರಿಸುತ್ತಾರೆ.

9. ಪೋಷಕತ್ವ ಪ್ರಕರಣಗಳಲ್ಲಿ ನಿರೀಕ್ಷಿತ ಸಾಕು ಪೋಷಕರು ಆರ್ಥಿಕ ಬೆಂಬಲ ಕೋರಿದಾಗ ಅಂತಹ ಪ್ರಕರಣಗಳನ್ನು ಮಾತ್ರ ಅನುಮೋದನೆ ಮತ್ತು ಪರಿಗಣನೆಗಾಗಿ ಪ್ರಾಯೋಜಕತ್ವ ಮತ್ತು ಪೋಷಕತ್ವ ಅನುಮೋದನಾ ಸಮಿತಿಯ ಮುಂದೆ ಇಡಲಾಗುತ್ತದೆ.

10. ಮಗುವನ್ನು ಪೋಷಕತ್ವದಲ್ಲಿ ನಿಯೋಜಿಸುವ ಮುನ್ನ ಮತ್ತು ಪೋಷಕತ್ವದ ಅವಧಿಯಲ್ಲಿ ಮಗುವಿಗೆ ಮತ್ತು ನಿರೀಕ್ಷಿತ ಸಾಕು ಪೋಷಕರಿಗೆ ಈ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಆಪ್ತ ಸಮಾಲೋಚನೆ ಮತ್ತು ಮಾರ್ಗದರ್ಶನವನ್ನು ನೀಡಲಾಗಿದೆ ಎಂಬುದನ್ನು ರಕ್ಷಣಾಧಿಕಾರಿ (PO - NIC) ಇವರು ಖಾತ್ರಿ ಪಡಿಸಿಕೊಳ್ಳುತ್ತಾರೆ.

11. ಜಿಲ್ಲಾ ಮಕ್ಕಳ ರಕ್ಷಣಾ ಘಟಕದಲ್ಲಿ ಕೆಲಸ ಮಾಡುತ್ತಿರುವ ಆಪ್ತ ಸಮಾಲೋಚಕರು, ಸಾಮಾಜಿಕ ಕಾರ್ಯ ಕರ್ತರು ಮತ್ತು ಸಮುದಾಯದ ಸ್ವಯಂ ಸೇವಕರ ಸಹಾಯದಿಂದ ಪಾಲನಾ ವ್ಯವಸ್ಥೆಯನ್ನು ಮಗುವಿಗೆ 18 ವರ್ಷ ವಯಸ್ಸಾಗುವವರೆಗೆ ರಕ್ಷಣಾಧಿಕಾರಿ (PO - NIC) ಮೇಲ್ವಿಚಾರಣೆ ಮಾಡುತ್ತಾರೆ.

12. ಜೈವಿಕ ಪೋಷಕರು ಜೀವಂತವಾಗಿದ್ದರೆ, ಅವರು ನಿಗಧಿತ ಭೇಟಿಗಳ ಮೂಲಕ ಮಗುವಿನೊಂದಿಗೆ ಸಂಪರ್ಕದಲ್ಲಿ ಇರುವುದನ್ನು ರಕ್ಷಣಾಧಿಕಾರಿ (PO - NIC) ಇವರು ಖಾತ್ರಿ ಪಡಿಸಿಕೊಳ್ಳುತ್ತಾರೆ.

13. ಈ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಸಾಕು ಕುಟುಂಬಗಳು ಅಥವಾ ಸ್ಥಾಪಿತ ಗುಂಪು ಪೋಷಕತ್ವ ಸಂಸ್ಥೆ ಮತ್ತು ಸಮುದಾಯವನ್ನು ನಿಯಮಿತವಾಗಿ ಭೇಟಿ ಮಾಡುವುದರ ಮೂಲಕ ರಕ್ಷಣಾಧಿಕಾರಿ (PO - NIC) ಇವರು ಪೋಷಕತ್ವ ಕಾರ್ಯಕ್ರಮದ ಮೇಲ್ವಿಚಾರಣೆ ಮತ್ತು ದಾಖಲೆಗಳನ್ನು ನಿರ್ವಹಿಸುತ್ತಾರೆ.

37. **ಮಕ್ಕಳ ಕಲ್ಯಾಣ ಸಮಿತಿಯ ಪಾತ್ರ:**
1. ಮಕ್ಕಳ ಪಾಲನಾ ಸಂಸ್ಥೆಯಲ್ಲಿ ವಾಸವಿರುವ ಪೋಷಕರನ್ನು ಹೊಂದಿಲ್ಲದ ಮತ್ತು ಹಲವಾರು ವರ್ಷಗಳಿಂದ ಪೋಷಕರೊಂದಿಗೆ ಸಂಪರ್ಕವನ್ನು ಹೊಂದಿರದ ಮಕ್ಕಳೊಂದಿಗೆ ಮಕ್ಕಳ ಕಲ್ಯಾಣ ಸಮಿತಿಯು ಸಂವಹನ ನಡೆಸುತ್ತದೆ ಹಾಗೂ ಪೋಷಕತ್ವ ಮತ್ತು ದತ್ತು ಸ್ವೀಕಾರವನ್ನು ಒಳಗೊಂಡಂತೆ ಕುಟುಂಬ ಆಧಾರಿತ ಪೋಷಣೆಯ ಒಳಿತಿನ ಕುರಿತು ಮಕ್ಕಳಿಗೆ ಆಪ್ತ ಸಮಾಲೋಚನೆ ನಡೆಸುತ್ತದೆ.
2. ಪೋಷಕತ್ವವನ್ನು ಆಯ್ಕೆ ಮಾಡಿಕೊಂಡಿರುವ ನಿರೀಕ್ಷಿತ ಸಾಕು ಪೋಷಕರ ಗೃಹ ಅಧ್ಯಯನ ವರದಿಯನ್ನು ಪರಿಶೀಲಿಸಿ ತೃಪ್ತಿಕರವಾಗಿದೆ ಎಂದ ನಂತರ ಬಾಲ ನ್ಯಾಯ ನಿಯಮಗಳ (ತಿದ್ದುಪಡಿ ನಿಯಮಗಳು 2022) ಫಾರಂ – 32 ರಲ್ಲಿ ಅಂತಿಮ ಆದೇಶವನ್ನು ಹೊರಡಿಸುತ್ತದೆ.
3. ಮಗುವಿನ ವೈಯುಕ್ತಿಕ ಪಾಲನಾ ಯೋಜನೆ ಅಗತ್ಯವಿರುವಲ್ಲಿ, ಜೈವಿಕ ಪೋಷಕರ ಒಪ್ಪಿಗೆ ಮತ್ತು ಆರ್ಥಿಕ ಬೆಂಬಲ ಕೋರಿರುವ ಪ್ರಕರಣಗಳಲ್ಲಿ SFCACಯ ಅನುಮೋದನೆಯನ್ನು ಪರಿಶೀಲಿಸಿ, ಮಗುವನ್ನು ಪೋಷಕತ್ವದಲ್ಲಿ ಇರಿಸುವುದರ ಬಗ್ಗೆ ತೃಪ್ತಿಕರ ಎಂಬುದನ್ನು ಖಾತ್ರಿಪಡಿಸಿಕೊಳ್ಳಲಾಗುತ್ತದೆ.
4. ಹಿರಿಯ ಮಕ್ಕಳೊಂದಿಗೆ (05 ವರ್ಷಕ್ಕಿಂತ ಮೇಲ್ಪಟ್ಟವರು) ಸಂವಾದ ನಡೆಸಿ ಅಗತ್ಯವಿರುವಲ್ಲಿ ಪೋಷಕತ್ವ / ಪೋಷಕ ದತ್ತುವಿಗೆ ಒಪ್ಪಿಗೆ ಪಡೆದುಕೊಳ್ಳಲಾಗುತ್ತದೆ.
5. ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಸಲ್ಲಿಕೆಯಾದ ಹೊಂದಾಣಿಕೆಯ ವರದಿಯನ್ನು ಪರಿಗಣಿಸುತ್ತದೆ.
6. ಬಾಲ ನ್ಯಾಯ ನಿಯಮಗಳು, 2016 (ತಿದ್ದುಪಡಿ ನಿಯಮ 2022) ರ ಫಾರಂ – 32 ರಲ್ಲಿ ನೀಡಲಾದ ನಿಗದಿತ ನಮೂನೆಯಲ್ಲಿ ಪೋಷಕತ್ವ / ಗುಂಪು ಪೋಷಕತ್ವದ ಮೂಲಕ ಮಗುವಿನ ಬೆಂಬಲಕ್ಕಾಗಿ ಆದೇಶವನ್ನು ಹೊರಡಿಸಿ, ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಕಳುಹಿಸಿಕೊಡಲಾಗುತ್ತದೆ.
7. ಮಗುವನ್ನು ಸರಿಯಾಗಿ ನೋಡಿಕೊಳ್ಳಲಾಗುತ್ತಿದೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಬಾಲ ನ್ಯಾಯ ನಿಯಮಗಳು, 2016 (ತಿದ್ದುಪಡಿ ನಿಯಮ 2022) ರ ಫಾರಂ – 35 ರ ಪ್ರಕಾರ ಸಾಕು ಕುಟುಂಬಗಳು ಮತ್ತು ಗುಂಪು ಪೋಷಕತ್ವದ ಆರೈಕೆದಾರರ ಮಾಸಿಕ ತಪಾಸಣೆಗಳನ್ನು ನಡೆಸಲಾಗುತ್ತದೆ.
8. ಪೋಷಕತ್ವದ ವಿಸ್ತರಣೆಗಾಗಿ ಆದೇಶವನ್ನು ಅಥವಾ ಅತೃಪ್ತಿಕರ ಪೋಷಣೆಯ ಸಂದರ್ಭದಲ್ಲಿ ಮುಕ್ತಾಯ ಆದೇಶಗಳನ್ನು ಹೊರಡಿಸುವುದು ಮತ್ತು ಮಗುವಿಗೆ ಪರ್ಯಾಯ ಪುನರ್ವಸತಿ ಕ್ರಮಗಳನ್ನು ನಿರ್ಧರಿಸಬೇಕು.

**38. ಪಾತ್ರಗಳು ಮತ್ತು ಜವಾಬ್ದಾರಿಗೆ ನಿಷ್ಠರಾಗಿರುವುದು:**
ಜಿಲ್ಲಾ ದಂಡಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ ಮತ್ತುSFCACಯ ಸದಸ್ಯರು ಮುಂತಾದ ಎಲ್ಲಾ ಭಾಗೀದಾರರು ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 (2021 ರಲ್ಲಿ ತಿದ್ದುಪಡಿ ಮಾಡಿದಂತೆ), ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು 2016 (2022 ರಲ್ಲಿ ತಿದ್ದುಪಡಿ ಮಾಡಿದಂತೆ), ದತ್ತು ನಿಯಮಗಳು 2022 ಮತ್ತು ಭಾರತ ಸರ್ಕಾರದ ಮಿಷನ್ ವಾತ್ಸಲ್ಯ ಯೋಜನೆಯಲ್ಲಿ ಪ್ರತಿಪಾದಿಸಿರುವ ಪಾತ್ರಗಳು ಮತ್ತು ಜವಾಬ್ದಾರಿಗಳಿಗೆ ಬದ್ಧರಾಗಿರಬೇಕು.

| **ಷೆಡ್ಯೂಲ್‌ಗಳ ಪಟ್ಟಿ** | | |
|---|---|---|
| **ಕ್ರ.ಸಂಖ್ಯೆ** | **ಷೆಡ್ಯೂಲ್‌ಗಳು** | **ವಿಷಯ** |
| 01 | ಷೆಡ್ಯೂಲ್-1 | ದಾಖಲೆಗಳ ಪಟ್ಟಿ |
| 02 | ಷೆಡ್ಯೂಲ್-2 | ದೂರಿನ ನಮೂನೆ |
| 03 | ಷೆಡ್ಯೂಲ್-3 | ಕುಟುಂಬ ಪೋಷಕತ್ವಕ್ಕಾಗಿ ಸಂಭಾವ್ಯ ಮಕ್ಕಳ ಗುರುತಿಸುವಿಕೆ |
| 04 | ಷೆಡ್ಯೂಲ್-4 | ಸಂಬಂಧಪಟ್ಟ ಕಾರ್ಯಕಾರಿಗಳು ಮತ್ತು ಭಾಗೀದಾರರಿಗೆ ಕಾಲಮಿತಿ |

**ಷೆಡ್ಯೂಲ್-1**
**ದಾಖಲೆಗಳ ಪಟ್ಟಿ**
**(ಕಂಡಿಕೆ 15)**

**ಎ) ಕುಟುಂಬ ಪೋಷಕತ್ವ**

| **ಗೊತ್ತು ಪಡಿಸಿದ ಪೋರ್ಟಲ್‌ನಲ್ಲಿ ನೋಂದಾಯಿಸುವಾಗ ನಿರೀಕ್ಷಿತ ಸಾಕು ಪೋಷಕರು (PFPಗಳು) ಅಪ್ಲೋಡ್ ಮಾಡಬೇಕಾದ ದಾಖಲೆಗಳು** | **ಇರಬೇಕಾದ ದಾಖಲೆಗಳು ಗೊತ್ತುಪಡಿಸಿದ ಪೋರ್ಟಲ್‌ನಲ್ಲಿ DCPU ನಿಂದ ಆಪ್ಲೋಡ್ ಮಾಡಲಾಗಿದೆ.** |
|---|---|
| **1.** ಮಗುವನ್ನು ಪೋಷಿಸಲು ಬಯಸುವ ಕುಟುಂಬದ ಅಥವಾ ವ್ಯಕ್ತಿಯ ಪ್ರಸ್ತುತ ಛಾಯಾಚಿತ್ರ<br>**2.** ಆಧಾರ್ ಕಾರ್ಡ್ ಅಥವಾ ಪಾಸ್ಪೋರ್ಟ್ ಅಥವಾ ಮತದಾರರ ಗುರುತಿನ ಕಾರ್ಡ್ ಅಥವಾ ನಿರೀಕ್ಷಿತ ಸಾಕು ಪೋಷಕರ ಚಾಲನಾ ಪರವಾನಗಿ ಅಥವಾ ಜನನ ಪ್ರಮಾಣ ಪತ್ರ ಮತ್ತು ಪ್ಯಾನ್ ಕಾರ್ಡ್ (ಅನ್ವಯಿಸಿದರೆ);<br>**3.** ಜನನ ಪ್ರಮಾಣ ಪತ್ರ ಅಥವಾ ಪೋಷಕರ ಜನ್ಮ ದಿನಾಂಕದ ಪುರಾವೆ;<br>**4.** ನಿರೀಕ್ಷಿತ ಸಾಕು ಪೋಷಕರು ಮತ್ತು ಅವರ ಕುಟುಂಬದ ಸದಸ್ಯರು ಯಾವುದೇ ದೀರ್ಘಕಾಲದ, ಸಾಂಕ್ರಾಮಿಕ ಅಥವಾ ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿಲ್ಲ ಮತ್ತು ಅವರು ಜೆಜೆ ನಿಯಮ 23 (12) ರಲ್ಲಿ ಉಲ್ಲೇಖಿಸಿರುವಂತೆ ಮಗುವನ್ನು ನೋಡಿಕೊಳ್ಳಲು ಆರ್ಹರಾಗಿದ್ದಾರೆ ಎಂದು ವೈದ್ಯಕೀಯ ಫಿಟ್ ನೆಸ್ ಪ್ರಮಾಣ ಪತ್ರ(ಗಳು) ನಿಯಮಗಳು 2016(2022 ರಲ್ಲಿ ತಿದ್ದುಪಡಿ);<br>**5.** ನಿವಾಸದ ಪುರಾವೆ (ಆಧಾರ್ ಕಾರ್ಡ್ ಅಥವಾ ಮತದಾರರ ಕಾರ್ಡ್ ಅಥವಾ ಪಾಸ್ ಪೋರ್ಟ್ ಅಥವಾ ಪ್ರಸಕ್ತ ವಿದ್ಯುತ್ ಬಿಲ್ ಅಥವಾ ದೂರವಾಣಿ ಬಿಲ್);<br>**6.** ಕಳೆದ ವರ್ಷದ ಆದಾಯದ ಪುರಾವೆ (ಸಂಬಳದ ಚೀಟಿ ಅಥವಾ ಸರ್ಕಾರಿ ಇಲಾಖೆ ನೀಡಿದ ಆದಾಯ ಪ್ರಮಾಣ ಪತ್ರ ಅಥವಾ ಆದಾಯ ತೆರಿಗೆ ರಿಟರ್ನ್);<br>**7.** ವಿವಾಹದ ಪ್ರಮಾಣ ಪತ್ರ ಅಥವಾ ವಿಚ್ಛೇದನದ ತೀರ್ಪು ಅಥವಾ ಸಕ್ಷಮ ನ್ಯಾಯಾಲಯದಿಂದ ಘೋಷಣೆ ಅಥವಾ ವಿಚ್ಛೇದನದ ತೀರ್ಪು ಕಡ್ಡಾಯವಲ್ಲದ, ವೈಯುಕ್ತಿಕ ಕಾನೂನಿನ ಮೂಲಕ ವಿಚ್ಛೇದನ ಪಡೆದ ಸಂದರ್ಭದಲ್ಲಿ ಪ್ರಮಾಣ ವಚನದ ಅಫಿಡವಿಟ್ ಅಥವಾ ಸಂಗಾತಿ ಮರಣ ಪ್ರಮಾಣ ಪತ್ರ, ಯಾವುದು ಅನ್ವಯಿಸುತ್ತದೆಯೋ ಅದು.<br>**8.** ಸಮುದಾಯದಲ್ಲಿ ಉತ್ತಮ ಸ್ಥಾನಮಾನ ಹೊಂದಿರುವ ಇಬ್ಬರು ವ್ಯಕ್ತಿಗಳಿಂದ ಶಿಫಾರಸ್ಸುಗಳು . | **1.** ವೈಯಕ್ತಿಕ ಪಾಲನಾ ಯೋಜನೆ – ಫಾರಂ 7<br>**2.** ಮಗುವಿನ ಸಾಮಾಜಿಕ ತನಿಖಾ ವರದಿ – ಫಾರಂ 22<br>**3.** ಮಕ್ಕಳ ಅಧ್ಯಯನ ವರದಿ – ಫಾರಂ 31 (ಒಂದು ವೇಳೆ ಮಗು ಸಮುದಾಯದಲ್ಲಿ ಇದ್ದಲ್ಲಿ)<br>**4.** ನಿರೀಕ್ಷಿತ ಸಾಕು ಪೋಷಕರ ಗೃಹ ಅಧ್ಯಯನ ವರದಿ- ಫಾರಂ 30<br>**5.** ಮಕ್ಕಳ ಕಲ್ಯಾಣ ಸಮಿತಿಯಿಂದ ಪೋಷಕತ್ವ ನಿಯೋಜನೆ ಆದೇಶ- ಫಾರಂ 32<br>**6.** ಪೋಷಕ ಕುಟುಂಬದಿಂದ ಹೊಣೆಗಾರಿಕೆ ಮುಚ್ಚಳಿಕೆ ಪತ್ರ (Undertaking)-ಫಾರಂ 33<br>**7.** ಕುಟುಂಬ ಪೋಷಕತ್ವ / ಗುಂಪು ಪೋಷಕತ್ವದ ಮಾಸಿಕ ತಪಾಸಣೆ- ಫಾರಂ 35<br>**8.** ಮಗುವಿನ ವೈದ್ಯಕೀಯ ಪರೀಕ್ಷೆಯ ವರದಿ-ದತ್ತು ಸ್ವೀಕಾರ ನಿಯಮಾವಳಿಗಳ ಪ್ರಕಾರ ಷೆಡ್ಯೂಲ್-3 |

## ಬಿ. ಪೋಷಕ ದತ್ತು

| ಗೊತ್ತುಪಡಿಸಲಾದ ಪೋರ್ಟಲ್ ನಲ್ಲಿ ಪೋಷಕ ದತ್ತುವಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಅಪ್ಲೋಡ್ ಮಾಡಬೇಕಾದ ದಾಖಲೆಗಳು |
|---|
| **1.** ದತ್ತು ಸ್ವೀಕಾರ ನಿಯಾಮವಳಿಗಳಲ್ಲಿ ಒದಗಿಸಲಾದ ಷೆಡ್ಯೂಲ್ I ರಲ್ಲಿ ಮಕ್ಕಳ ಕಲ್ಯಾಣ ಸಮಿತಿಯಿಂದ ಮಗುವನ್ನು ಕಾನೂನು ಬದ್ಧವಾಗಿ ದತ್ತು ಮುಕ್ತಗೊಳಿಸಿದ ಪ್ರಮಾಣ ಪತ್ರ. |
| **2.** ದತ್ತು ಸ್ವೀಕಾರ ನಿಯಾಮವಳಿಗಳಲ್ಲಿ ಒದಗಿಸಲಾದ ಷೆಡ್ಯೂಲ್ II ರಲ್ಲಿ ಮಕ್ಕಳ ಅಧ್ಯಯನ ವರದಿ |
| **3.** ದತ್ತು ಸ್ವೀಕಾರ ನಿಯಾಮವಳಿಗಳಲ್ಲಿ ಒದಗಿಸಲಾದ ಷೆಡ್ಯೂಲ್ VII ರಲ್ಲಿ ಗೃಹ ಅಧ್ಯಯನ ವರದಿ |
| **4.** ದತ್ತು ಸ್ವೀಕಾರ ನಿಯಾಮವಳಿಗಳಲ್ಲಿ ಒದಗಿಸಲಾದ ಷೆಡ್ಯೂಲ್ III ರಲ್ಲಿ ವೈದ್ಯಕೀಯ ಪರೀಕ್ಷಾ ವರದಿ |
| **5.** ಮಗುವು ಪೋಷಕತ್ವದಲ್ಲಿ ಇರುವ ಅದೇ ಕುಟುಂಬಕ್ಕೆ ದತ್ತು ಹೋಗಲು ಮಗುವಿನ ಒಪ್ಪಿಗೆ |
| **6.** ಯಾವುದೇ ಇತರೆ ಅಗತ್ಯ ದಾಖಲೆಗಳು |

**ಷೆಡ್ಯೂಲ್-2**
**ದೂರು ನಮೂನೆ**
**(ಕಂಡಿಕೆ 28)**

ದಿನಾಂಕ:

ಗೆ,

ಜಿಲ್ಲಾ ಮಕ್ಕಳ ರಕ್ಷಣಾ ಘಟಕ / ಮಕ್ಕಳ ಕಲ್ಯಾಣ ಸಮಿತಿ / ಉಸ್ತುವಾರಿ-ಸ್ಥಳೀಯ ಪೊಲೀಸ್ ಠಾಣೆ / ಜಿಲ್ಲಾ ದಂಡಾಧಿಕಾರಿಗಳು

**1.** ಸಾಕು ಮಗುವಿನ ವಿವರಗಳು:

ಎ) ಹೆಸರು :

ಬಿ) ಲಿಂಗ :

ಸಿ) ವಯಸ್ಸು :

ಡಿ) ಜಾತಿ :

ಇ) ಧರ್ಮ :

2. ಮಗುವಿನ ಸಾಕು ಪೋಷಕರ ವಿವರಗಳು: (ಸಾಧ್ಯವಾದಷ್ಟು ಮಾಹಿತಿಯನ್ನು ಭರ್ತಿ ಮಾಡಿ):

ಎ) ಹೆಸರು :

ಬಿ) ವಿಳಾಸ:

ಸಿ) ರಾಜ್ಯ:

ಡಿ) ಪಿನ್ ಕೋಡ್:

ಎಫ್) ದೂರವಾಣಿ ಸಂಖ್ಯೆ:

ಜಿ) ಇ-ಮೇಲ್ ವಿಳಾಸ:

3. ದೂರಿನ ಸ್ವರೂಪ ಮತ್ತು ಅಪೇಕ್ಷಿತ ಕ್ರಮದ ವಿವರಗಳು:

______________________________________________________________________

______________________________________________________________________

______________________________________________________________________

ತಮ್ಮ ವಿಶ್ವಾಸಿ,

ದೂರು ಸಲ್ಲಿಸುವ ವ್ಯಕ್ತಿಯ

ಹೆಸರು:

ವಿಳಾಸ:

(ಸಹಿ)

## ಷೆಡ್ಯೂಲ್-3
## ಕುಟುಂಬ ಪೋಷಕತ್ವಕ್ಕಾಗಿ ಸಂಭಾವ್ಯ ಮಕ್ಕಳ ಗುರುತಿಸುವಿಕೆ
## (ಕಂಡಿಕೆ 32)

1. ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ವಾಸಿಸುತ್ತಿರುವ ಪೋಷಕರ ಭೇಟಿ ಇಲ್ಲದ ಮತ್ತು ಅನರ್ಹ ಪೋಷಕರ ವರ್ಗದ ಅಡಿಯಲ್ಲಿ ಬರುವ ಹಿರಿಯ ಮಕ್ಕಳು.
2. ಸಂತ್ರಸ್ಥ ಮಗು ಅಥವಾ ಬಾಲ್ಯ ವಿವಾಹದ ಸನ್ನಿಹಿತ ಆಪಾಯದಲ್ಲಿರುವ ಮಗು
3. HIV ಮತ್ತು AIDS, ಬಾಧಿತ ಮತ್ತು ಸೋಂಕಿತ ಮಗು
4. ಮಾನವ ನಿರ್ಮಿತ ನೈಸರ್ಗಿಕ ವಿಕೋಪಗಳ ಸಂತ್ರಸ್ಥ ಮಗು.
5. ಒಂಟಿ ಪೋಷಕರ ಮಗು (ತಂದೆ ಅಥವಾ ತಾಯಿ, ಒಬ್ಬರು ಜೀವಂತವಾಗಿದ್ದಾರೆ) ಮತ್ತು ಪೋಷಕರು ಮಗುವಿನ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಬಯಸುವುದಿಲ್ಲ.
6. ಮಗು ಮಲ ತಾಯಿ / ತಂದೆಯೊಂದಿಗೆ ವಾಸಿಸುತ್ತಿದೆ ಮತ್ತು ಮನೆಯಲ್ಲಿ ಕೌಟುಂಬಿಕ ಹಿಂಸೆಯನ್ನು ಎದುರಿಸುತ್ತಿದೆ.
7. ಅತ್ಯಂತ ಬಡತನವಿರುವ ಕುಟುಂಬದ ಮಗು.
8. ಮುರಿದ ಮದುವೆಯ ಕುಟುಂಬಗಳ ಮಕ್ಕಳು.
9. ಇಬ್ಬರೂ ಪೋಷಕರು ಬದಕಿರುವುದಿಲ್ಲ / ಬದುಕಿರುವ ಏಕ ಪೋಷಕರು ದುಡಿಮೆಗಾಗಿ ಹೊರಗೆ ಹೋಗಬೇಕು ಅಥವಾ ಶಿಕ್ಷೆಯನ್ನು ಎದುರಿಸಬೇಕಾಗಿರುತ್ತದೆ ಮತ್ತು ಬದುಕಿರುವ ಏಕ ಪೋಷಕರು ಮಗುವನ್ನು ಪೋಷಿಸಲು ಸಾಧ್ಯವಾಗುತ್ತಿಲ್ಲ.
10. ಪೋಷಕರು ಮಾದಕ ವ್ಯಸನಗಳಾಗಿರುವ ಕುಟುಂಬದ ಮಗು ಮತ್ತು ಮಗು ಅಪಾಯದಲ್ಲಿದೆ.
11. ದೌರ್ಜನ್ಯ ಮತ್ತು ನಿರ್ಲಕ್ಷ್ಯಕ್ಕೊಳಗಾದ ಮಕ್ಕಳು.
12. ದತ್ತು ಹೋಗಲು ಒಪ್ಪದ ಮಗು.
13. ಮರಣ ದಂಡಣೆಗೆ ಗುರಿಯಾಗಿರುವ ಪೋಷಕರನ್ನು ಹೊಂದಿರುವ ಮಕ್ಕಳು.
14. ಜೈವಿಕ ಪೋಷಕರು ಜೀವಂತವಾಗಿರದ ಕಾರಣ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ವಾಸಿಸುತ್ತಿರುವ ಮತ್ತು ಅವರ ಸಂಬಂಧಿಕರು ಅಥವಾ ಪೋಷಕರು ಅವರನ್ನು ಮನೆಗೆ ಕರೆದುಕೊಂಡು ಹೋಗಲು ಬಯಸದ ಎಲ್ಲಾ ಮಕ್ಕಳು.

**ಷೆಡ್ಯೂಲ್-4**

**ಸಂಬಂಧಪಟ್ಟ ಕಾರ್ಯಕಾರಿಗಳು ಮತ್ತು ಭಾಗೀದಾರರಿಗೆ ಕಾಲಮಿತಿ**

| ಕ್ರ.ಸಂ | ಹಂತಗಳು | ಕಾರ್ಯಕಾರಿಗಳು / ಭಾಗೀದಾರರು | ಕಾಲಮಿತಿ |
|---|---|---|---|
| 01 | ಪೋಷಕತ್ವ ಪ್ರಕರಣಗಳನ್ನು ಗೊತ್ತು ಪಡಿಸಿದ ಪೋರ್ಟಲ್ ನಲ್ಲಿ ನವೀಕರಿಸಿರುವುದು | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ | ವಿವಿಧ ಹಂತಗಳಿಗೆ ನಿಗದಿ ಪಡಿಸಲಾದ ಕಾಲಮಿತಿಯಂತೆ |
| 02 | ಕುಟುಂಬ ಪೋಷಕತ್ವಕ್ಕಾಗಿ ಸ್ಥಳೀಯ ಪತ್ರಿಕೆಗಳಲ್ಲಿ ನಿಯಮಿತವಾಗಿ ಅರ್ಜಿಯನ್ನು ಆಹ್ವಾನಿಸಿ ಜಾಹೀರಾತು ನೀಡುವುದು. | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ | ಪ್ರತಿ ಮಾಹೆ |
| 03 | ಕುಟುಂಬ ಪೋಷಕತ್ವಕ್ಕಾಗಿ ಸ್ವೀಕೃತ ಅರ್ಜಿಯನ್ನು ಪರಿಶೀಲಿಸುವುದು. | ಜಿಲ್ಲಾ ಮಕ್ಕಳ ಘಟಕ | ಪೋರ್ಟಲ್‌ನಲ್ಲಿ ಅರ್ಜಿಯನ್ನು ಸ್ವೀಕರಿಸಿದ 30 ದಿನಗಳೊಳಗೆ |
| 04 | ಫಾರಂ 31 ರಲ್ಲಿ ಮಕ್ಕಳ ಅಧ್ಯಯನ ವರದಿ, ಫಾರಂ 22 ರಲ್ಲಿ ಸಾಮಾಜಿಕ ತನಿಖಾ ವರದಿ ಮತ್ತು ಫಾರಂ 07 ರಲ್ಲಿ ವೈಯಕ್ತಿಕ ಪಾಲನಾ ಯೋಜನೆ | ಜಿಲ್ಲಾ ಮಕ್ಕಳ ಘಟಕ (ಮಗು ಅಥವಾ / ಮಕ್ಕಳ ಪಾಲನಾ ಸಂಸ್ಥೆ ಇರುವ ಜಿಲ್ಲೆಗೆ ಸಂಬಂಧಿಸಿದ ಘಟಕ) | ತಿಂಗಳೊಳಗೆ / ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರು ಪಡಿಸಿದ 30 ದಿನಗಳೊಳಗೆ |
| 05 | ಮಗುವನ್ನು ಪೋಷಕತ್ವದಲ್ಲಿ ಇರಿಸುವ ಅವಧಿಯನ್ನು ನಿರ್ದಿಷ್ಟಪಡಿಸಿ ಫಾರಂ 32 ರಲ್ಲಿ ಅಂತಿಮ ಆದೇಶ | ಮಕ್ಕಳ ಕಲ್ಯಾಣ ಸಮಿತಿ | ಪೋಷಕತ್ವಕ್ಕಾಗಿ ಅರ್ಜಿಯನ್ನು ಸಲ್ಲಿಸಿದ 03 ತಿಂಗಳೊಳಗೆ |
| 06 | ನಿರ್ಧಾರಗಳು: ಪೋಷಕತ್ವಕ್ಕಾಗಿ ಆರ್ಥಿಕ ಬೆಂಬಲ | SFCAC | ಅರ್ಜಿಯನ್ನು ಸ್ವೀಕರಿಸಿದ 03 ತಿಂಗಳೊಳಗೆ |
| 07 | ನಿಗದಿತ ಬ್ಯಾಂಕ್ / ಅಂಚೆ ಕಛೇರಿಯಲ್ಲಿ ಮಗುವಿನ ಮತ್ತು ಸಾಕು ಪೋಷಕರ ಹೆಸರಿನಲ್ಲಿ ಜಂಟಿ ಖಾತೆಯನ್ನು ತೆರೆಯುವುದು | ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ | ಮಕ್ಕಳ ಕಲ್ಯಾಣ ಸಮಿತಿಯು ಅಂತಿಮ ಆದೇಶ ಹೊರಡಿಸಿದ ತಿಂಗಳೊಳಗೆ. |
| 08 | ಮಿಷನ್ ಖಾತೆಯಿಂದ ಅನುದಾನ ಬಿಡುಗಡೆಗೆ ಮಂಜೂರಾತಿ | ಜಿಲ್ಲಾ ದಂಡಾಧಿಕಾರಿಗಳು | ಪ್ರತಿಮಾಹೆ |
| 09 | ಮಕ್ಕಳ ಕಲ್ಯಾಣ ಸಮಿತಿಯಿಂದ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ನಡೆಸಿದ ಮಾಸಿಕ ತಪಾಸಣೆ, ಪೋಷಕತ್ವಕ್ಕಾಗಿ ಮಕ್ಕಳನ್ನು ಗುರುತಿಸಿರುವುದು ಮತ್ತು ಮಕ್ಕಳನ್ನು ಪೋಷಕತ್ವದಲ್ಲಿ ನಿಯೋಜಿಸಿದ ಕುರಿತು ಪರಿಶೀಲನೆ | ಜಿಲ್ಲಾ ದಂಡಾಧಿಕಾರಿಗಳು | ತ್ರೈಮಾಸಿಕ |

